MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111


YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 220 | ಭಾನುವಾರ : 15-06-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 220 | SUNDAY : 15-06-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಕೃಷ್ಣಾ ನದಿಗೆ 14 ಕ್ರಸ್ಟ್ ಗೇಟ್‌ಗಳಿಂದ 50 ಸಾವಿರ ಕ್ಯೂಸೆಕ್ ನೀರು ಬಿಡುಗಡೆ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.14–**ಕೃಷ್ಣಾ ತೀರದ ಅಚ್ಚುಕಟ್ಟು ಪ್ರದೇಶಗಳಲ್ಲಿ ಸುರಿದ ಮಳೆಯ ಪರಿಣಾಮ ಬಸವ ಸಾಗರ ಜಲಾಶಯ ಭರ್ತಿಗೆ ಕ್ಷಣಗಣನೆ ಆರಂಭವಾಗಿದ್ದು,ಬಸವ ಸಾಗರ ಜಲಾಶಯದಿಂದ ಕೃಷ್ಣಾ ನದಿಗೆ 14 ಕ್ರಸ್ಟ್ ಗೇಟ್ ಗಳ ಮೂಲಕ 52 ಸಾವಿರ ಕ್ಯೂಸೆಕ್ ನೀರು ಹರಿ ಬಿಡಲಾಗುತ್ತಿದೆ ಎಂದು ಕೆಬಿಜೆಎನ್‌ಎಲ್ ಅಧಿಕಾರಿಗಳಿಂದ ಮಾಹಿತಿ ತಿಳಿದು ಬಂದಿದೆ.

ವಿಜಯಪುರ,ಬಾಗಲಕೋಟೆ,ಬೆಳಗಾವಿ,ಮಹಾರಾಷ್ಟ್ರ ಸೇರಿದಂತೆ ಕೃಷ್ಣಾ ತೀರದ ಜಲಾನಯನ ದ ಪಶ್ಚಿಮ ಘಟ್ಟಗಳಲ್ಲಿ ಸುರಿದ ಮಳೆಯಿಂದ ಕಳೆದ ತಿಂಗಳು ಮೇ 28 ರಿಂದ 950 ಕ್ಯೂಸೆಕ್ ಒಳ ಹರಿವು ಪ್ರಾರಂಭವಾಗಿ,ಏರಿಳಿತ ಕಂಡಿತ್ತು.

ಶುಕ್ರವಾರ ರಾತ್ರಿ ಆಲಮಟ್ಟಿ ಜಲಾಶಯದ ಹೊರ ಹರಿವು ಹೆಚ್ಚಾಗಿದ್ದು ಇಂದು ಬೆಳಿಗ್ಗೆ 50 ಸಾವಿರ ಕ್ಯೂಸೆಕ್ ನೀರು ಬಸವ ಸಾಗರ ಜಲಾಶಯಕ್ಕೆ ಒಳ ಹರಿವಿದೆ.

ಬಸವಸಾಗರ ಜಲಾಶಯದ ನೀರಿನ ಗರಿಷ್ಠ ಮಟ್ಟ 492.252 ಮೀಟರ್ ಇದ್ದು ,ಪ್ರಸ್ತುತ 491.18 ಮೀಟರ್ ನೀರಿನ ಮಟ್ಟವಿದೆ.ಜಲಾಶಯದ ಗರಿಷ್ಠ ನೀರಿನ ಸಂಗ್ರಹ 33.313 ಟಿಎಂಸಿ ಇದ್ದು,ಪ್ರಸ್ತುತ 28 57 ಟಿಎಂಸಿ ಶೇಕಡಾ 85.77 ರಷ್ಟು ನೀರು ಸಂಗ್ರಹವಿದೆ.ಒಳ ಹರಿವು 50 ಸಾವಿರ ಕ್ಯೂಸೆಕ್,ಹೊರ ಹರಿವು 52,704 ಕ್ಯೂಸೆಕ್ ಇದೆ.

## ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣ ಅಂಬೇಡ್ಕರ್ ಅವರ ಆರ್ಥಿಕ ಚಿಂತನೆ ಸರ್ವಕಾಲಕ್ಕೂ ಪ್ರಸ್ತುತ :ಕು.ನಾಯಕ

ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.14–**ಡಾ. ಅಂಬೇಡ್ಕರ್ ಅಸ್ಪೃಶ್ಯತೆ ವಿರುದ್ಧ, ಸಾಮಾಜಿಕ ನ್ಯಾಯ, ಸಮ-ಸಮಾಜದ ನಿರ್ಮಾಣ ದೊಂದಿಗೆ ಅವರ ಆರ್ಥಿಕ ಚಿಂತನೆಗಳು ಹಿಂದೆ, ಇಂದು, ಮುಂದೆಯೂ ಪ್ರಸ್ತುತವಾಗಿದೆ ಅಲ್ಲದೆ ಅವರ ಚಿಂತನೆಗಳು ಮತ್ತು ದೇಶದ ಅಭಿವೃದ್ಧಿಗೆ ನಾಂದಿಯಾಗಿದೆ. ರೂಪಾಯಿ ಮೌಲ್ಯದ ಕುರಿತು ವಿದ್ಯಾರ್ಥಿಗಳು, ಸಾರ್ವಜನಿಕರು ಅರಿಯಬೇಕಾಗಿದೆ. ದೇಶದ ಆರ್ಥಿಕ ಮೌಲ್ಯದ ಮಹತ್ವದ ಬಗ್ಗೆ ತಿಳಿಸುವ ಇಂತಹ ಕಾರ್ಯಕ್ರಮಗಳ ಆಯೋಜನೆ ಅವಶ್ಯಕವಾಗಿದೆ ಎಂದು ರಾಯಚೂರು ಲೋಕಸಭೆ ಸಂಸದರಾದ ಜಿ ಕುಮಾರ ನಾಯಕ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.




ರಾಯಚೂರಿನ ಪ್ರಥಮ ದರ್ಜೆ ವಿದ್ಯಾಲಯದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ ರವರು ರಚಿಸಿರುವ "ದಿ ಪ್ರಾಬ್ಲೆಮ್ ಆಫ್ ದಿ ಇಂಡಿಯನ್ ರುಪೀ: ಇಟ್ಸ್ ಓರಿಜಿನ್ ಆಂಡ್ ಇಟ್ಸ್ ಸಲೂಷನ್" ಮಹಾಪ್ರಬಂಧದ ಶತಮಾನೋತ್ಸವ ಹಾಗೂ 371(ಜೆ) ಕಲಂ ಸಮರ್ಪಕ ಜಾರಿಯಾಗಿ ಆಯೋಜಿಸಿರುವ ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣ ಹಾಗೂ "ರತ್ನ ಪ್ರಭಾ" ಸಂಚಿಕೆ ಬಿಡುಗಡೆ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಡಾ. ಬಿ.ಆರ್.ಅಂಬೇಡ್ಕರ ರವರು ಪ್ರತಿಪಾದಿಸಿರುವ ಆಚಾರ-ವಿಚಾರಗಳು ಹಾಗೂ ಆರ್ಥಿಕ ವಿಷಯಗಳ ಬಗ್ಗೆ ಅರಿವು ಮೂಡಿಸುವ ಸಂಬಂಧ ಈ ಎರಡು ವಿಷಯಗಳು ಸೇರಿದಂತೆ ಇನ್ನೂ ಇಂತಹ ಹತ್ತು-ಹಲವಾರು ವಿಷಯಗಳನ್ನೊಳಗೊಂಡ ಮತ್ತು ಅಂತರ ಶಿಸ್ತೀಯ ಲೇಖನಗಳುಳ್ಳ "ರತ್ನ ಪ್ರಭಾ" ಎಂಬ ಸಂಚಿಕೆ ಬಿಡುಗಡೆ ಮಾಡುವಲ್ಲಿ ರಾಯಚೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ "ಬಿ.ಎನ್. ರಾವು" ಕೋಶದ ಅರ್ಥಶಾಸ್ತ್ರ 2ನೇ ಪುಟಕ್ಕೆ

## ರಾಮ ಮಂದಿರ ಮಾದರಿ ಪ್ರದರ್ಶನ



**ಮಾನ್ವಿ,ಜೂ.14–**ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀನಗರೇಶ್ವರ ಆರ್ಯವೈಶ್ಯ ಸಂಘದ ವತಿಯಿಂದ ಬಿದರೆ ಗ್ರಾಮದ ವಿನಯರಾಮ ರವರ ಅರಮನೆ ಶೈಲಿಯ ಅಯ್ಯೋಧ್ಯೆ ಶ್ರೀರಾಮ ಮಂದಿರ ಮಾದರಿ ಪ್ರದರ್ಶನ ಜೂ.25 ರಿಂದ ಜುಲೈ 1 ರವರೆಗೆ ಪ್ರತಿದಿನ ಸಂಜೆ 6ರಿಂದ 9 ಗಂಟೆ ವರೆಗೆ ನಡೆಯಲಿದ್ದು ಮಾನ್ವಿ ಕಲ್ಮಠ ಶ್ರೀವಿರೂಪಾಕ್ಷ ಶಿವಚಾರ್ಯ ಮಹಾಸ್ವಾಮಿಗಳು ಹಾಗೂ ಚೀಕಲಪರ್ವಿ ಶ್ರೀರುದ್ರಮುನೀಶ್ವರ ಮಠದ ಶ್ರೀಸದಾಶಿವಮಹಾಸ್ವಾಮಿಗಳು ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಪ್ರತಿದಿನ ಸಂಜೆ 6ರಿಂದ ಶ್ರೀಕನ್ನಿಕಾ ಭಜನಾ ಮಂಡಳಿ ಹಾಗೂ ಶ್ರೀವಾಸವಾಂಬ ಭಜನಾ ಮಂಡಳಿ ,ವಾಸವಿ ಪುರುಷರ ಭಜನಾ ಮಂಡಳಿ ತಂಡದಿಂದ ಭಜನೆ ಹಾಗೂ ಭಕ್ತಿ ಗೀತೆಗಳ ಗಾಯನ ನಡೆಯಲಿದೆ. ಅದ್ದರಿಂದ ತಾಲೂಕಿನ ಭಕ್ತದಿ ಗಾಳು ಅಯ್ಯೋಧ್ಯೆ ಶ್ರೀರಾಮ ಮಂದಿರ ಮಾದರಿ ಪ್ರದರ್ಶನ ಹಾಗೂ ಬಾಲರಾಮನ ದರ್ಶನ ಮಾಡಿಕೊಂಡು ಶ್ರೀರಾಮಚಂದ್ರ ಪ್ರಭುವಿನ ಕೃಪೆಗೆ ಪಾತ್ರರಾಗುವಂತೆ ಶ್ರೀನಗರೇಶ್ವರ ಆರ್ಯವೈಶ್ಯ ಸಂಘದ ತಾ. ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಸಂಚಾರಿ ಆರೋಗ್ಯ ಘಟಕದ ಸದುಪಯೋಗ ಪಡೆದುಕೊಳ್ಳಿ




ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.14–** ಗ್ರಾಮೀಣ ಜನರಿಗೆ ವೈದ್ಯ ಸೇವೆ ಬಲಪಡಿಸುವ ಉದ್ದೇಶದಿಂದ ಖಾಸಗಿ ಸಹಭಾಗಿತ್ವದ ಸುಸಜ್ಜಿತ 'ಸಂಚಾರಿ ಆರೋಗ್ಯ ಘಟಕ' ಆರಂಭಿಸಲಾಗಿದೆ ಇದನ್ನು ಜನರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಂಚಾರಿ ಆರೋಗ್ಯ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನರು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುವ ಪ್ರವೃತ್ತಿ ತೊರೆದು ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವ ಗುಣಮಟ್ಟದ ಸೇವೆಯನ್ನು ಬಳಸಿಕೊಳ್ಳಬೇಕು. ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿ ದುಬಾರಿ ಬಿಲ್ ಪಾವತಿಸುವ ತಾಪತ್ರಯದ ಬದಲಿಗೆ, ಸರ್ಕಾರಿ 2ನೇಪುಟಕ್ಕೆ

## ನವಂಬರ್‌ಗೆ ಸಿಎಂ ಬದಲಾವಣೆ ವಿಶ್ವನಾಥ್ ಭವಿಷ್ಯ

**ಮೈಸೂರು,ಜೂ,14:** ನವಂಬರ್ ಗೆ ಸಿಎಂ ಬದಲಾವಣೆ ಆಗುತ್ತದೆ. ಡಿ.ಕೆ ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಇಬ್ಬರಲ್ಲಿ ಒಬ್ಬರು ಸಿಎಂ ಆಗುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಎಚ್ ವಿಶ್ವನಾಥ್ ಭವಿಷ್ಯ ನುಡಿದರು.

ಮೈಸೂರಿನಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತಂತೆ ಕೈ ಪಾಳಯದಲ್ಲಿ ವ್ಯಾಪಕ ಚರ್ಚೆಯಾಗುತ್ತಿದ್ದ ಬೆನ್ನಲ್ಲೆ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಹೆಚ್.ವಿಶ್ವನಾಥ್, ಸಿಎಂ ಸಿದ್ದರಾಮಯ್ಯ ಹತ್ತು ವರ್ಷದ ಹಿಂದೆಯೇ ಜಾತಿವಾರು ಜನಗಣತಿ ಮಾಡಿಸಿದ್ದರು. ಒಂದುವರೆ ಲಕ್ಷ ಶಿಕ್ಷಕರು 2 ವರ್ಷ ಗಣತಿ ಮಾಡಿದ್ದರು. ಅದಕ್ಕೆ 170 ಕೋಟಿಗೂ ಅಧಿಕ ಹಣ ಖರ್ಚಾಗಿತ್ತು. ಆಗಿನಿಂದಲೂ ವರದಿ ಬಹಿರಂಗ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದರು. ಇದೀಗ ಹೈಕಮಾಂಡ್ ಗೆ ಹೆದರಿಕೊಂಡು ಮತ್ತೆ ಜಾತಿಗಣತಿ ಮಾಡಿರುವುದಾಗಿ ಹೇಳಿದ್ದಾರೆ. ಇದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಜಾತಿಗಣತಿ ಮಾಡಲು ಶಿಕ್ಷಕರು ಬೇಕು. ಈಗ ತಾನೇ ಶಾಲೆಗಳು ಆರಂಭವಾಗಿರುವುದರಿಂದ ಶಿಕ್ಷಕರು ಲಭ್ಯವಾಗೋದಿಲ್ಲ. ಸಿದ್ದರಾಮಯ್ಯ ಹಾವಾಡಿಗನ ರೀತಿ ಈಗ ಮತ್ತೆ ಜಾತಿಗಣತಿ ಮಾಡಿಸುವುದಾಗಿ ಹೇಳ್ತಿದ್ದಾರೆ. ಮುಂದಿನ ನವೆಂಬರ್ ಡಿಸೆಂಬರ್ ಗೆ ಸಿದ್ದರಾಮಯ್ಯ ಚೇಂಜ್ ಆಗ್ತಾರೆ. ಅದು ಹೇಗೆ ಜಾತಿಗಣತಿ ಮಾಡಿಸುತ್ತೀರಿ.

ಮರುಜಾತಿಗಣತಿ ಮಾಡಿಸುವು



ದಿಲ್ಲ ಎಂದು ಹೈಕಮಾಂಡ್ ಗೆ ಹೇಳಿದ್ದರೇ ಸಿದ್ದರಾಮಯ್ಯ ಹೀರೋ ಆಗುತ್ತಿದ್ದರು. ಸಿದ್ದರಾಮಯ್ಯ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿದರು. ಮೂರು ತಿಂಗಳೊಳಗೆ ಜಾತಿಗಣತಿ ಮಾಡಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಸುಮ್ಮನೇ ದೇವರಾಜ ಹೆಸರು ಹೇಳಬೇಡಿ.

ಪ್ರಾಮಾಣಿಕತೆ ಇಲ್ಲದ ಸಿಎಂ ಸಿದ್ದರಾಮಯ್ಯ ಎಂದು ಚರಿ 2ನೇ ಪುಟಕ್ಕೆ

## ಐದು ದಿನ ಉಚಿತ ಯೋಗ ಶಿಬಿರ : ಬಸವಲಿಂಗಯ್ಯ ಹಿರೇಮಠ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.14–** ಅಂತರಾಷ್ಟ್ರೀಯ ಯೋಗದಿನದ ಅಂಗವಾಗಿ 5 ದಿನಗಳ ಉಚಿತ ಯೋಗ ಶಿಬಿರವನ್ನು ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಯೋಗ ಚಿಕಿತ್ಸೆ ಕೇಂದ್ರದ ಗುರು ಬಸವಲಿಂಗಯ್ಯ ಹಿರೇಮಠ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ಧಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರತಿದಿನ ಯೋಗಾಭ್ಯಾಸ ಮಾಡುವುದು ನಮ್ಮ ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಯೋಗವು ಹಲವಾರು ರೋಗಗಳನ್ನು ನಮ್ಮತ್ತ ಸುಳಿಯದಂತೆ ನೋಡಿಕೊಳ್ಳುತ್ತದೆ. ಯೋಗವು ದೇಹ ಮತ್ತು ಮನಸ್ಸನ್ನು ಒಟ್ಟಿಗೆ ತರುತ್ತದೆ .ಚಲನೆ, ಉಸಿರಾಟ ಮತ್ತು ಧ್ಯಾನ ಯೋಗವು ಸುಧಾರಿತ ಭಂಗಿ, ನಮ್ಯತೆ, ಶಕ್ತಿ, ಸಮತೋಲನ ಮತ್ತು ದೇಹದ ಅರಿವು ಸೇರಿದಂತೆ ಅನೇಕ ದೈಹಿಕ ಮತ್ತು ಮಾನಸಿಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಯೋಗದಲ್ಲಿ ಹಲವಾರು ವಿಧಗಳಿವೆ, ಆದರೆ ಪ್ರತಿ ಯೊಂದೂ ಮೂಲಭೂತವಾಗಿ ಉಸಿರಾಟದ ಅರಿವಿನೊಂದಿಗೆ ಅಭ್ಯಾಸ ಮಾಡುವ ರಚನಾತ್ಮಕ ಭಂಗಿಗಳನ್ನು ಅವಲಂಬಿಸಿದೆ. ಅಂತಾರಾಷ್ಟ್ರೀಯ ಯೋಗ ದಿನವನ್ನು ವಿಶ್ವದಾದ್ಯಂತ ಜೂನ್ 21 ರಂದು ಆಚರಿಸಲಾಗುತ್ತದೆ. ಅದರ




ಪ್ರಯುಕ್ತ 17 ಜೂನ್ ರಿಂದ 21 ಜೂನ್ ವರೆಗೆ ಪತಾಂಜಲಿ ಯೋಗ ಸಮಿತಿ ಹಾಗೂ ಶ್ರೀಸಂಜೀವಿನಿ ಯೋಗ ಟ್ರಸ್ಟ್ ವತಿಯಿಂದ 5 ದಿನಗಳ ಯೋಗ ಶಿಬಿರವನ್ನು ಆಯೋಜಿಸಲಾಗಿದ್ದು, ಇದರ ಸದುಪಯೋಗವನ್ನು ಪಡೆ ದುಕೊಳ್ಳಬೇಕೆಂದು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ 96113 65158, 9448599519, 9980603150 ಸಂಪರ್ಕಿಸಲು ಕೋರಿದರು.

ಈ ಸಂದರ್ಭದಲ್ಲಿ ಪತಂಜಲಿ ಯೋಗ ಸಮಿತಿ ಅದ್ಯಕ್ಷ ಈರಣ್ಣ ಶೆಟ್ಟಿ, ಅಶೋಕ ಯೋಗ ಶಿಕ್ಷಕರು, ಹನುಮಗೌಡ ಬೆಂಡೋಣಿ, ಚಂದ್ರಶೇಖರ ಲಿಂಗಸುಗೂರು, ಮಲ್ಲಿಕಾರ್ಜುನಗೌಡ, ಶಿವರಾಜ ಇದ್ದರು

## ಸಮಗ್ರ ನೀರಾವರಿ,ಏಮ್ಸ್‌ಗಾಗಿ ಸಂಕಲ್ಪ ಸಮಾವೇಶ

ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.14–**ಮಾಜಿ ಸಚಿವರಾದ ಕೆ. ಶಿವನಗೌಡ ನಾಯಕ ಅವರ 48ನೇ ಹುಟ್ಟುಹಬ್ಬದ ಪ್ರಯುಕ್ತ, ರಾಯಚೂರು ಜಿಲ್ಲೆಗೆ ಸಮಗ್ರ ನೀರಾವರಿ ಹಾಗೂ ಏಮ್ಸ್ ಮಂಜೂರಾತಿಗಾಗಿ ಜನಪರ ಪಕ್ಷಾತೀತ ಸಂಕಲ್ಪ ಸಮಾವೇಶವನ್ನು ಆಯೋಜಿಸಲಾಗಿದೆ. ಜಿಲ್ಲಾ ಮಟ್ಟದ ಈ ಮಹತ್ವದ ಸಭೆಯು ಆರೋಗ್ಯ, ಕೃಷಿ ಮತ್ತು ರೈತರ ಹಿತದೃಷ್ಟಿಯಿಂದ, ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಜನಪರ ಹೋರಾಟಗಾರರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರಮುಖರನ್ನು ಒಂದೇ ವೇದಿಕೆಯಲ್ಲಿ ಒಂದು ಕನಸು ಮತ್ತು ಸಂಕಲ್ಪಕ್ಕೆ ಒಳಗೊಂಡಂತೆ ಒಟ್ಟುಗೂಡಿಸಲಿದೆ.

ಕೆ.ಶಿವನಗೌಡ ನಾಯಕ್ ಅವರು ಜಿಲ್ಲಾ ಅಭಿವೃದ್ಧಿಗೆ ಹಾಗೂ ಏಳಿಗೆಗಾಗಿ ತಮ್ಮ ಬದ್ಧತೆಯನ್ನು ಪ್ರತಿಬಿಂಬಿಸುವಂತೆ,



ಈ ಬಾರಿ ಹುಟ್ಟುಹಬ್ಬವನ್ನು ಸಾರ್ವಜನಿಕ ಜೀವನಕ್ಕೆ ಅರ್ಪಿಸಿರುವುದೇ ಈ ಸಮಾವೇಶದ ಉದ್ದೇಶವಾಗಿದೆ. ಜನಾಂದೋಲನ ರೂಪಿಸಲು ಸೂಕ್ತ ಆಲೋಚನೆಗಳು, ಸಲಹೆಗಳು ಮತ್ತು ದೃಷ್ಟಿಕೋನಗಳನ್ನೊಳಗೊಂಡ ಈ ಸಮಾವೇಶವು ಪಕ್ಷಾತೀತವಾಗಿದ್ದು, ಜಿಲ್ಲೆಯ ಪ್ರಗತಿಗೆ ಮೌಲ್ಯಯುತ ದಿಕ್ಕು ನೀಡಲಿದೆ.

ಈ ಕುರಿತ ಪೂರ್ವಭಾವಿ ಸಭೆಯು ದಿನಾಂಕ 18 ಜೂನ್ 2025, ಬುಧವಾರ ಬೆಳಿಗ್ಗೆ 11 ಗಂಟೆಗೆ ಕವಿತಾಳ ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಈ ಸಭೆಯಲ್ಲಿ ಭಾಗವಹಿಸಿ ತಮಗೆ ಇರುವ ಸಲಹೆ, ಸೂಚನೆಗಳನ್ನು ಹಂಚಿಕೊಳ್ಳುವಂತೆ ಸಂಘಟಕರು ಮನವಿ ಮಾಡಿದ್ದಾರೆ. ಸಮಾವೇಶ ಯಶಸ್ವಿಯಾಗಲು ಎಲ್ಲರ ಸಹಕಾರ ಅಗತ್ಯವಿದೆ ಎಂದು ಅವರು ತಿಳಿಸಿದ್ದಾರೆ.

ಈ ಸಭೆಯನ್ನು ಯಶಸ್ವಿಗೊಳಿಸಲು ಟಿಎಪಿಸಿಎಂಎಸ್ ಅಧ್ಯಕ್ಷ ತಿಮ್ಮಾರೆಡ್ಡಿ ಗೌಡ ಬೋಗಾವತಿ, ಸಿರವಾರ ಕೆಎಸ್‌ಎನ್ ಅಭಿಮಾನಿ ಬಳಗ ಅಧ್ಯಕ್ಷ ಉಮಾಶಂಕರ್ ಜೆಗರಕಲ್ ಮಾಜಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಹಾಗೂ ಮಾನ್ವಿ ಕೆಎಸ್‌ಎನ್ ಅಭಿಮಾನಿ ಬಳಗದ ಅಧ್ಯಕ್ಷ ವೀರೇಶ್ ನಾಯಕ್ ಬೆಟ್ಟದೂರು ಅವರು ಮನವಿ ಮಾಡಿದ್ದಾರೆ

## ಮೊದಲನೇಯ ಪುಟದಿಂದ

# ಅಂಬೇಡ್ಕರ್ ಅವರ ಆರ್ಥಿಕ ಚಿಂತನೆ ಸರ್ವಕಾಲಕ್ಕೂ ಪ್ರಸ್ತುತ :ಕು.ನಾಯಕ

ವಿಭಾಗದ ಪಾತ್ರವು ತುಂಬಾ ಶ್ಲಾಘನೀಯವಾಗಿದೆ ಎಂದರು.

ನಂತರ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್‌ಸ್ ಬೋಸರಾಜು ಅವರು ಮಾತನಾಡಿ, ಡಾ. ಬಿ ಆರ್ ಅಂಬೇಡ್ಕರ್ ಅವರು ಸಮ-ಸಮಾಜ ನಿರ್ಮಾಣ, ಸಾಮಾಜಿಕ ನ್ಯಾಯ ಜೊತೆಗೆ ಬಹುದೊಡ್ಡ ಆರ್ಥಿಕ ತಜ್ಞರಾಗಿದ್ದರು. ದೇಶದ ಹಣಕಾಸು, ಅರ್ಥಶಾಸ್ತ್ರಕ್ಕೆ ಅವರು ನೀಡಿದ ಕೊಡುಗೆಗಳು ಇಂದಿಗೂ ಪ್ರಸ್ತುತವಾಗಿದೆ. ದೇಶದಲ್ಲಿ ಆರ್ಥಿಕ ವ್ಯವಸ್ಥೆಯ ಪಾತ್ರದ ಬಗ್ಗೆ ಮಕ್ಕಳಿಗೆ ತಿಳಿಸುವ ಕಾರ್ಯ ಶ್ಲಾಘನೀಯಾವಾಗಿದೆ. ದೇಶದ ಆರ್ಥಿಕ ಬಲವರ್ಧನೆಗೆ ಜಾತಿ ವ್ಯವಸ್ಥೆ ಕಂಟಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್‌ಎಸ್‌ಸ್ ಬೋಸರಾಜು ಹಾಗೂ ರಾಯಚೂರು ಲೋಕಸಭಾ ಸಂಸದರಾದ ಜಿ ಕುಮಾರ್ ನಾಯಕ್ ಅವರು ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲರಾದ ವೆಂಕಣ್ಣ, ಉಪನ್ಯಾಸಕರುಗಳಾದ ಪ್ರಾಣೇಶ್ ಕುಲಕರ್ಣಿ, ಕಾಂಗ್ರೆಸ್ ಮುಖಂಡರಾದ ಜಯಣ್ಣ, ರುದ್ರಪ್ಪ ಅಂಗಡಿ ಸರಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಕೃಷ್ಣ ಶಾವಂತಿಗೆರ, ಕಮಲ್ ಕುಮಾರ್ ಜೈನ್, ಡಾ, ಶೋಭಾ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು

# ಸಂಚಾರಿ ಆರೋಗ್ಯ ಘಟಕದ ಸದುಪಯೋಗ ಪಡೆದುಕೊಳ್ಳಿ

ವೃತ್ತಿಪರ ವೈದ್ಯರ ಸೇವೆಯನ್ನು ಬಳಸಿಕೊಳ್ಳಬೇಕು. ಮೆರಿಟ್ ಮೇಲೆ ನೇಮಕಗೊಳ್ಳುವ ಸರ್ಕಾರಿ ಆಸ್ಪತ್ರೆಗಳ ವೈದ್ಯರ ಸೇವಾ ಗುಣಮಟ್ಟ ಖಾಸಗಿಯವರಿಗಿಂತ ಕಡಿಮೆ ಇರುವುದಿಲ್ಲ ಬಡವರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಕಾಳಜಿಯಿಂದ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಸಿಗದ ಸೇವೆಗಳೂ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುತ್ತಿವೆ. ಈ ಅವಕಾಶವನ್ನು ಜನರು ಬಳಸಿಕೊಳ್ಳಬೇಕು. ಆದರೂ, ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೇವೆ ಲಭ್ಯತೆ ಕೊರತೆ ಇರುವ ಕಾರಣ ಸಂಚಾರಿ ಆರೋಗ್ಯ ಘಟಕಗಳನ್ನು ಆರಂಭಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಅಧ್ಯಕ್ಷ ಪಾಮಯ್ಯ ಮುರಾರಿ, ನಗರ ಯೋಜನ ಪ್ರಾಧೀಕರಾದ ಅಧ್ಯಕ್ಷ ಭೂಪನಗೌಡ ಕರಡಕಲ್, ಮುಖಂಡರಾದ ಶರಣಪ್ಪ ಮೇಟಿ, ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ತಾಲೂಕು ಅಧ್ಯಕ್ಷ ಅಯ್ಯಪ್ಪ ಮಾಳೂರು, ಹುಲ್ಲೇಶ ಸಾಹುಕಾರ, ಗುಂಡಪ್ಪ ನಾಯಕ, ಸಂಜೀವಪ್ಪ ಚಲುವಾದಿ, ಆಸ್ಪತ್ರೆಯ ಮುಖ್ಯಾವೈದ್ಯಾಧಿಕಾರಿ ಡಾ.ರುದ್ರಗೌಡ ಪಾಟೀಲ್, ಡಾ ಅಮರೇಶ ಪಾಟೀಲ್ ಮಾಕಾಪೂರ ಸೇರಿ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಇದ್ದರು.

# ನವಂಬರ್‌ಗೆ ಸಿಎಂ ಬದಲಾವಣೆ ವಿಶ್ವನಾಥ್ ಭವಿಷ್ಯ

ತ್ರೆಯಲ್ಲಿ ದಾಖಲಾಗಿ ಹೋದರು. ಸುಳ್ಳು ಹೇಳಿಕೊಂಡು ಓಡಾಡುತ್ತಿರುವ ಸಿಎಂ ಸಿದ್ದರಾಮಯ್ಯ ಎಂದು ಚರಿತ್ರೆಯಲ್ಲಿ ದಾಖಲಾಗುತ್ತಾರೆ. 170 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿ ಜಾತಿಗಣತಿ ಮಾಡಿಸಿದ ವರದಿಯನ್ನು ತಿಪ್ಪೆಗೆ ಎಸೆದಿದ್ದಾರೆ ಎಂದು ಎಚ್ ವಿಶ್ವನಾಥ್ ವಾಗ್ದಾಳಿ ನಡೆಸಿದರು. ಆರ್ ಸಿಬಿ ವಿಜಯೋತ್ಸವದ ವೇಳೆ ಡಿಸಿಎಂ ಡಿ.ಕೆ ಶಿವಕುಮಾರ್ ಎಲ್ಲವನ್ನೂ ಕೆಡಿಸಿ ಬಿಟ್ಟರು. ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದುಕೊಂಡಿದ್ದೆ.

# ಕ್ಯಾನ್ಸರ್ ಪೀಡಿತ ಮಕ್ಕಳಿಗೆ ವಸತಿ ಶಾಲೆ ಆರಂಭ

**ಬೆಂಗಳೂರು,ಜೂ.14–** ಕ್ಯಾನ್ಸರ್‌ನಿಂದ ಸಂಕಷ್ಟಕ್ಕೊಳಗಾದ ವಿದ್ಯಾರ್ಥಿಗಳಿಗೆ ಚಿಕಿತ್ಸೆಯ ಜೊತೆಗೆ ಓದಿಗೂ ಅವಕಾಶವಾಗುವಂತೆ ನಗರದ ಕಿದ್ವಾಯಿ ಆಸ್ಪತ್ರೆಯ ಬಳಿ ವಸತಿ ಸಹಿತ ಶಾಲೆ ಆರಂಭಿಸಲಾಗುತ್ತಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧುಬಂಗಾರಪ್ಪ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಾದ್ಯಂತ 3,500 ಮಕ್ಕಳು ಕ್ಯಾನ್ಸರ್‌ನಿಂದ ಬಾಧಿತರಾಗಿದ್ದು, ಅವರಿಗೆ ಕಲಿಕೆಯ ಅವಕಾಶ ವಂಚಿತ ರಾಗದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕ್ಯಾನ್ಸರ್ ಗುಣಮುಖವಾಗುವ ಆರೋಗ್ಯ ಸಮಸ್ಯೆ. ರೋಗ ಬಂದಾಕ್ಷಣ ಬಹಳಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ತಾವು ಸಚಿವರಾದ ಮೇಲೆ ಕ್ವಾಲಿಟಿ, ಇಕ್ವಾಲಿಟಿ, ಆಕ್ಸಿಸಬಲಿಟಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಕ್ಯಾನ್ಸರ್ ಕಾರಣಕ್ಕಾಗಿ ಅವರಿಗೆ ಶಿಕ್ಷಣ ಕೈಗೆಟಕುದಂತಿರಬಾರದು ಎಂದು ಹೇಳಿದರು.

ಕಿದ್ವಾಯಿ ಬಳಿ ಜಾಗ ಹುಡುಕಲು ಈಗಾಗಲೇ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇವೆ. ನಮ ಇಲಾಖೆಯ 3 ಎಕರೆಯಷ್ಟು ಜಾಗ ಸಿಕ್ಕರೆ ಇದೇ ವರ್ಷದ ಜುಲೈನಿಂದಲೇ ಶಾಲೆ ಆರಂಭಿಸುವ ಉಮೇದಿನಲ್ಲಿ ನಾವಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಗತ್ಯವಿರುವ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ.ಮಕ್ಕಳಿಗೆ ಓದಲು ಅನುಕೂಲವಾಗುವಂತೆ ಶಾಲೆ, ಅದರ ಪಕ್ಕದಲ್ಲೆ? ಹಾಸ್ಟೆಲ್, 5 ರಿಂದ 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಪೋಷಕರಿರಬೇಕಾಗುತ್ತದೆ. ಅದಕ್ಕಾಗಿ ಪ್ರತ್ಯೆಕ ಕಟ್ಟಡ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಈ ಶಾಲೆಯಲ್ಲಿ ಒದಗಿಸಲಾಗುವುದು. ಜೊತೆಗೆ ಆಸ್ಪತ್ರೆಗೆ ಮತ್ತು ಶಾಲೆಗೆ ಮಿನಿಬಸ್‌ನಂತಹ ವಾಹನದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ ಎಂದರು.

ಕ್ಯಾನ್ಸರ್‌ನಿಂದ ಬಾಧಿತರಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿರುವ ಸಂತ್ರಸ್ತರಿಂದಲೇ ಈ ಯೋಜನೆಯ ವರದಿಯನ್ನು ತಯಾರಿಸಲಾಗಿದೆ. ಎಲ್ಲಾ ರೀತಿಯ ಸಕಲ ಸೌಲಭ್ಯಗಳೊಂದಿಗೆ ಶಾಲೆಯನ್ನು ಆರಂಭಿಸಲಾಗುವುದು. ಮೊದಲಿಗೆ ಸ್ವಂತ ಕಟ್ಟಡ ಸಿಗದೇ ಇದ್ದರೆ ಅಥವಾ ಕಟ್ಟಡ ನಿರ್ಮಿಸಲು ಸಾಧ್ಯವಾಗದೇ ಇದ್ದರೆ ಬಾಡಿಗೆ ಕಟ್ಟಡದಲ್ಲೆ? ಶಾಲೆ ಆರಂಭಿಸಲಾಗುವುದು. ಆರಂಭದಲ್ಲಿ 10ನೇ ತರಗತಿಯವರೆಗೂ ಶಾಲೆ ನಡೆಸಲಾಗುತ್ತದೆ. ಅಗತ್ಯಬಿದ್ದರೆ ಅದನ್ನು ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದರು.

ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ಬಹಳ ಮುಖ್ಯವಾಗಿದೆ. ಹೀಗಾಗಿ ಕಿದ್ವಾಯಿ ಆಸ್ಪತ್ರೆಯ ಬಳಿಯೇ ಶಾಲೆ ಆರಂಭಿಸುವ ಚಿಂತನೆ ಇದೆ. ಮುಂದಿನ ದಿನಗಳಲ್ಲಿ ಬೇರೆಬೇರೆ ಕಡೆಗಳಲ್ಲಿಯೂ ಈ ರೀತಿಯ ಶಾಲೆ ಆರಂಭಿಸುವ ಚಿಂತನೆ ಇದೆ. ಮೊದಲ ಹಂತದಲ್ಲಿ ಒಂದೂವರೆ ಸಾವಿರ ಮಕ್ಕಳಿಗೆ ವಸತಿಸಹಿತ ಶಾಲೆ ಆರಂಭಿಸಲಾಗುವುದು. ಇದಕ್ಕಾಗಿ ಸಿಎಸ್‌ಆರ್ ನಿಧಿಯನ್ನು ಬಳಸಲಾಗುತ್ತದೆ ಎಂದರು.ಡಾ.ರಾಜ್‌ಕುಮಾರ್ ಅವರ ಸಹೋದರ ವರದರಾಜು ಅವರ ಮೊಮಕ್ಕಳಿಗೂ ಈ ರೀತಿಯ ಆರೋಗ್ಯ ಸಮಸ್ಯೆಗೆ ನಾವೇ ಚಿಕಿತ್ಸೆ ಕೊಡಿಸಿದ್ದೇವೆ. ಅದರ ಕಷ್ಟನಷ್ಟಗಳ ಅರಿವಿದೆ. ನೂತನ ಶಾಲೆಯ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗುವುದು. ಸಾಮಾನ್ಯ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಆತಿಯವಾಗಿ ಬೆರೆಯಲು ಬೋಧಕ, ಬೋಧಕೇತರ ಸಿಬ್ಬಂದಿಗಳನ್ನು ಸಜ್ಜುಗೊಳಿಸುವುದಾಗಿ ಹೇಳಿದರು. ತಾವು ಶಿಕ್ಷಣ ಸಚಿವರಾದ ಬಳಿಕ ಏನಾದರೂ ಹೊಸದಾಗಿ ಮಾಡಬೇಕು ಎಂಬ ಆಲೋಚನೆ ಬಂದಿತ್ತು. ಈ ಕಾರಣಕ್ಕೆ ಕ್ಯಾನ್ಸರ್ ಬಾಧಿತ ಮಕ್ಕಳ ವಸತಿಶಾಲೆ ರೂಪಿಸಲಾಗುತ್ತಿದೆ ಎಂದರು.

ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಮಾತ್ರ ಬೋಧನೆ ಮಾಡುತ್ತಿರುವುದಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿತವಾಗುತ್ತಿದೆ. ಇದನ್ನು ಸರಿಪಡಿಸಲು ದ್ವಿಭಾಷಾ ಮಾಧ್ಯಮ ಜಾರಿಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳು, ಪೋಷಕರು ತಮಗೆ ಅನುಕೂಲವಾದಂತಹ ಮಾಧ್ಯಮವನ್ನು

ಆಯ್ಕೆ ಮಾಡಿಕೊಳ್ಳಬಹುದು. ಈ ಕ್ರಮದಿಂದ ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿದ್ದು, ಅಂತಹ ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಹತ್ತಿರದ ಶಾಲೆಗೆ ವಿನಿಯೋಜನೆಗೊಳಿಸುವುದಾಗಿ ತಿಳಿಸಿದರು.

ಡಯಟ್‌ಗೆ ವರ್ಗಾವಣೆ ಮಾಡಿಸಿಕೊಂಡು ಕಾಲಾಹರಣಕ್ಕೆ ಬರುವ ಅಧಿಕಾರಿಗಳಿಗೆ ಮುಂದಿನ ದಿನಗಳಲ್ಲಿ ಆಯಾ ವ್ಯಾಪ್ತಿಯ ಕಳಪೆ ಶಾಲೆಗಳ ಉಸ್ತುವಾರಿಯನ್ನು ವಹಿಸಲಾಗುವುದು. ಮುಂದಿನ ದಿನಗಳಲ್ಲಿ ಆ ಶಾಲೆಯ ಫಲಿತಾಂಶ ಉತ್ತಮಗೊಳ್ಳಬೇಕು. ಇಲ್ಲದೇ ಇದ್ದರೆ ಡಯಟ್‌ಗೆ ವರ್ಗಾವಣೆ ತೆಗೆದುಕೊಂಡ ಶಿಕ್ಷಕರನ್ನು ವಾಪಸ್ ಬೋಧನಾ ಕಾರ್ಯನಿರ್ವಹಣೆಗೆ ನಿಯೋಜಿಸಲಾಗುತ್ತದೆ ಎಂದರು.

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದಿಂದ 50 ಸಾವಿರ ಶಿಕ್ಷಕರುಗಳಿಗೆ ತರಬೇತಿ ಕೊಡಿಸಲು ಮನವಿ ನೀಡಲಾಗಿದೆ. ಉತ್ತಮ ಶಿಕ್ಷಕರಿಂದ ಬೋಧನೆ ಮಾಡಿಸಲು ಶಿಕ್ಷಣ ಇಲಾಖೆಯ ಯೂ-ಟ್ಯೂಬ್ ಚಾನೆಲ್ ಆರಂಭಿಸಲಾಗುತ್ತಿದೆ. ರಾಜ್ಯದ ಏಳೆಂಟು ಕಡೆ ಸ್ವಂತ ಸ್ಟುಡಿಯೋಗಳನ್ನು ಶುರು ಮಾಡುತ್ತೇವೆ ಎಂದು ಹೇಳಿದರು.

# ವಕೀಲರ ವಿವಿಧ ಬೇಡಿಕೆಗಳ ಪೂರೈಸಲು ರಾಜ್ಯಪಾಲರಿಗೆ ಮನವಿ

**ದೇವದುರ್ಗ, ಜೂ. 14–** ವಕೀಲರ ಹಕ್ಕುಗಳು ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು, ದೇವದುರ್ಗ ವಕೀಲರ ಸಂಘದ ವತಿಯಿಂದ ಶುಕ್ರವಾರ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಅಖಿಲ ಭಾರತ ವಕೀಲರ ಒಕ್ಕೂಟದ ರಾಜ್ಯ ಸಮಿತಿಯ ಕರೆಯ ಮೇರೆಗೆ ನಡೆದ ಈ ಪ್ರತಿಭಟನೆಯಲ್ಲಿ, ದೇವದುರ್ಗದ ವಕೀಲರು ಸಂಘಟಿತವಾಗಿ ತಹಸೀಲ್ದಾರ್ ಕಚೇರಿಗೆ ಪಾದಯಾತ್ರೆ ನಡೆಸಿ, ತಮ್ಮ ಬೇಡಿಕೆಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದರು.



ವಕೀಲರ ವಿರುದ್ಧ ಪೊಲೀಸ್ ಇಲಾಖೆಯ ಏಕಪಕ್ಷೀಯ ವರ್ತನೆ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ವಕೀಲರು, ತಮ್ಮ ಮನವಿ ಪತ್ರದಲ್ಲಿ ಒಟ್ಟು 13 ಬೇಡಿಕೆಗಳನ್ನು ಪ್ರಮುಖವಾಗಿ ಮುಂದಿಟ್ಟರು. ಅವುಗಳಲ್ಲಿ, ವಕೀಲರ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ, ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಕಡ್ಡಾಯ ಪಾಲನೆ, ಕಿರಿಯ ವಕೀಲರಿಗೆ ಆರ್ಥಿಕ ನೆರವು, ತಾಲೂಕು ಮತ್ತು ಜಿಲ್ಲಾ ವಕೀಲರ ಸಂಘಗಳಿಗೆ ಅನುದಾನ, ವೈದ್ಯಕೀಯ ಮತ್ತು ಜೀವ ವಿಮಾ ಸೌಲಭ್ಯಗಳು ಸೇರಿವೆ.

ಇದಲ್ಲದೆ, ನ್ಯಾಯಾಲಯಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ವಕೀಲರ ಅಕಾಡೆಮಿಗಳ ಸ್ಥಾಪನೆ, ಮತ್ತು ನ್ಯಾಯಾಲಯ ಆವರಣದಲ್ಲಿ ವಕೀಲರಿಗೆ ಚೇಂಬರ್ ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ಇತರೆ ಮಹತ್ವದ ಬೇಡಿಕೆಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ ಸಂಘದ ಅಧ್ಯಕ್ಷ ಸುಕುಮುನಿರೆಡ್ಡಿ ನಗರಗುಂಡ ಅವರು, "ಸರ್ಕಾರವು ತಕ್ಷಣವೇ ಸ್ಪಂದಿಸದಿದ್ದಲ್ಲಿ ಮುಂದಿನ ಹಂತದ ಹೋರಾಟ ಅನಿವಾರ್ಯವಾಗಲಿದೆ," ಎಂದು ಎಚ್ಚರಿಕೆ ನೀಡಿದರು.

# ಕಾಲ್ತುಳಿತ: ಸಿಎಂ ರಾಜೀನಾಮೆಗೆ ಆಗ್ರಹ




**ಕುಣಿಗಲ್, ಜೂ. 14–** ಆರ್.ಸಿ.ಬಿ. ವಿಜಯೋತ್ಸವದ ಕಾಲ್ತುಳಿತಕ್ಕೆ 11 ಜನ ಅಮಾಯಕರ ಸಾವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇರ ಕಾರಣವಾಗಿದ್ದರೂ ಸಹ ದಕ್ಷ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಿರುವುದು ಖಂಡನೀಯ. ಕೂಡಲೇ ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕು ಮತ್ತು ಭಾರತ ಭ್ರಷ್ಟಾಚಾರ ವಿರೋಧಿ ಮಂಡಳಿ ಉಪಾಧ್ಯಕ್ಷ ಕುಣಿಗಲ್ ಶಿವಣ್ಣ ಒತ್ತಾಯಿಸಿದರು.

ಇಲ್ಲಿನ ತಾಲ್ಲೂಕು ಕಚೇರಿ ಮುಂಭಾಗ ಸಂಘಟನೆಯ ಪದಾಧಿಕಾರಿಗಳೊಂದಿಗೆ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅನೇಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಕಾಂಗ್ರೆಸ್ ಪಕ್ಷಕ್ಕೇ ಅಸಹ್ಯ ಉಂಟು ಮಾಡಿದ್ದಾರೆ. ಈ ಮುಖ್ಯಮಂತ್ರಿ ಆಡಳಿತ ಅವಧಿಯಲ್ಲಿ ಬೇಜವಾಬ್ದಾರಿ ವರ್ತನೆ ಹಾಗೂ ಭ್ರಷ್ಟಾಚಾರ ಆಡಳಿತದಿಂದ ಸಂಪೂರ್ಣವಾಗಿ ರಾಜ್ಯ ಸರ್ಕಾರ ಹದಗೆಟ್ಟಿದೆ. ಇವರ ಮೈಸೂರಿನ ಮುಡಾ ಹಗರಣಗಳು ವಾಲ್ಮೀಕಿ ಹಗರಣಗಳು ಸೇರಿದಂತೆ ಅನೇಕ ಭಾಗ್ಯಗಳನ್ನು ನೀಡುವ ಮೂಲಕ ಜನಸಾಮಾನ್ಯರಿಗೆ ದ್ರೋಹ ಮಾಡುತ್ತಿದ್ದಾರೆ. ಅಲ್ಲದೆ ಆರ್‌ಸಿಬಿಯ ವಿಜಯೋತ್ಸವದಲ್ಲಿ ಇವರ ಆಡಳಿತ ವೈಫಲ್ಯದಿಂದ 11 ಜನ ಅಮಾಯಕರು ಕಾಲ್ತುಳಿತಕ್ಕೆ ಬಲಿಯಾಗಿದ್ದಾರೆ. ಅದಕ್ಕೆ ದಕ್ಷ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಸರ್ಕಾರದವರಿಗೆ ನೈತಿಕತೆಯೇ ಇಲ್ಲ. ಮೊದಲು ಸಿಎಂ ಸ್ಥಾನ ಬಿಟ್ಟು ತೊಲಗಲಿ ಎಂದು ಕಿಡಿ ಕಾರಿದರು.

ರಾಜ್ಯದಲ್ಲಿರುವ ಪ್ರತಿಯೊಂದು ಜಾತಿಗಳಲ್ಲೂ ಗುಂಪುಗಾರಿಕೆಯನ್ನಾಗಿ ಮಾಡಿ ಜಾತಿ ಒಡೆದು ಆಳುವ ಕೆಟ್ಟ ಸಂಪ್ರದಾಯ ಕಾಂಗ್ರೆನಲ್ಲಿ ಹುಟ್ಟುಹಾಕಿ ಕಾಂಗ್ರೆಸ್ ಪಕ್ಷವನ್ನೇ ಹಾಳು ಮಾಡುತ್ತಿದ್ದಾರೆ. ಪ್ರತಿ ಹೆಜ್ಜೆ ಹೆಜ್ಜೆಗೂ ಆಡಳಿತದಲ್ಲಿ ಕಲಹ ಉಂಟು ಮಾಡುತ್ತಾ ಅಧಿಕಾರ ನಡೆಸುತ್ತಿರುವ ಮುಖ್ಯಮಂತ್ರಿಗಳ ನಡೆ ಕಾಂಗ್ರೆಸ್ ಪಕ್ಷವನ್ನು ಸರ್ವ ನಾಶ ಆಗುವಂತೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇನ್ನು ರಾಜ್ಯದಲ್ಲಿ ಬಿಜೆಪಿ ಹಾಗೂ ಜನತಾದಳ ಕಾಂಗ್ರೆಸ್ ಪಕ್ಷದ ಜತೆ ಒಳ ಒಪ್ಪಂದ ಮಾಡಿಕೊಂಡು ಸ್ವೇಚ್ಛಾಚಾರದ ಆಡಳಿತ ನಡೆಸುತ್ತಾ ಜನಸಾಮಾನ್ಯರನ್ನು ಹಲವಾರು ಸಮಸ್ಯೆಗಳಿಗೆ ದೂಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಇಂದಿರಾ ಗಾಂಧಿ 16 ವರ್ಷ ರಾಷ್ಟದ ಪ್ರಧಾನಮಂತ್ರಿಯಾಗಿ ದೇಶದ ಬಡವರು ಶೋಷಿತರ ಪರವಾಗಿ ಕೆಲಸ ಮಾಡಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಹೆಸರಿನಲ್ಲಿ ನೂರಾರು ಹಗರಣ ಮಾಡುತ್ತಾ ಕಾಂಗ್ರೆಸ್ ಸರ್ಕಾರವನ್ನು ಮುಳುಗಿಸಲು ಹೊರಟಿದ್ದಾರೆ ಎಂದು ದೂರಿದರು. ಪ್ರತಿಭಟನೆಯಲ್ಲಿ ರಾಷ್ಟ್ರೀಯ ಮಾನವ ಹಕ್ಕು ಮತ್ತು ಭಾರತ ಭ್ರಷ್ಟಾಚಾರ ವಿರೋಧಿ ಮಂಡಳಿ ಚೇರ್ಮನ್ ಮತ್ತು ಸಂಸ್ಥಾಪಕರಾದ ಡಾ. ಹೆಚ್. ರಾಜಗೋಪಾಲ್, ಗೌರವಾಧ್ಯಕ್ಷ ವೇಣುಗೋಪಾಲ್, ಜಿಲ್ಲಾಧ್ಯಕ್ಷ ಪ್ರಸಾದ್‌ಕುಮಾರ್, ತಾಲ್ಲೂಕು ಅಧ್ಯಕ್ಷ ಶಿವಾನಂದ್ ಮತ್ತಿತರರು ಭಾಗವಹಿಸಿದ್ದರು.

# ಗ್ಯಾರಂಟಿಗಳಿಗೆ ಹಣ ಹೊಂದಿಸಲು ಸಿಎಂ ಪರದಾಡುತ್ತಿದ್ದಾರೆ : ವಿಜಯೇಂದ್ರ ವ್ಯಂಗ್ಯ

**ಬೆಂಗಳೂರು,ಜೂ.14–** ತಾವೇ ಘೋಷಣೆ ಮಾಡಿಕೊಂಡಿರುವ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಪರದಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರಿಸ್ಥಿತಿಯನ್ನು ನೋಡಿದರೆ, ತಮಗೆ ಕನಿಕರ ಬರುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವ್ಯಂಗ್ಯವಾಡಿದ್ದಾರೆ.



ಸುದ್ದಿಗಾರರ ಜೊತೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸದೆ ಕೈ ಕೈ ಹಿಸುಕಿಕೊಳ್ಳುತ್ತಿರುವ ಸಿದ್ದರಾಮಯ್ಯನವರ ಪರಿಸ್ಥಿತಿ ಪಾಪ, ಯಾರಿಗೂ ಬರಬಾರದು. ತಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮುಖ್ಯಮಂತ್ರಿಗಳು ದೆಹಲಿಯಲ್ಲಿ ಕುಳಿತು ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ, ಕುತಂತ್ರ ಮತ್ತು ಷಡ್ಯಂತ್ರ ಮಾಡಿದ್ದಾರೆ. ಬಹಳ ದೊಡ್ಡ ಮನಸ್ಸು ಮಾಡಿ, 16ನೇ ಹಣಕಾಸಿನ ಆಯೋಗದ ಸಭೆಯಲ್ಲಿ ಭಾಗವಹಿಸಿದ್ದಾರೆ. ರಾಜ್ಯದ ಪರವಾಗಿ ವಿಚಾರಮಂಡನೆ ಮಾಡಿದ್ದು, ಅವರಿಗೆ ಅಭಿನಂದನೆಗಳು.

ಕೇಂದ್ರದ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳಿಗೆ ಮುಜುಗರವೇ, ಇವರು ರಾಜ್ಯದ ಮುಖ್ಯಮಂತ್ರಿಯೇ ಅಥವಾ ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳೇ ಎಂದು ಬಿಜೆಪಿ ಕೇಳಿತ್ತು. ಹಣಕಾಸಿನ ಆಯೋಗದ ಸಭೆಯಲ್ಲಿ ಭಾಗವಹಿಸಿ ಹಣಕಾಸಿನ ವಿಚಾರ ಪ್ರಸ್ತಾಪ ಮಾಡಿ ಸರಿಪಡಿಸಿ ಎಂದು ಒತ್ತಾಯಿಸಿದರು.

ದೆಹಲಿ ಸಭೆಯಲ್ಲಿ ಭಾಗವಹಿಸಿದ್ದು ಸ್ವಾಗತಾರ್ಹ. ಆದರೆ, ಮುಖ್ಯಮಂತ್ರಿಗಳನ್ನು ನೋಡಿದರೆ ಪಾಪ ಅನಿಸುತ್ತದೆ. ಗ್ಯಾರಂಟಿಗಳ ಅನುಷ್ಠಾನಕ್ಕೆ ಹಣ ಕೊಡೀಕರಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೇ ನಡೆಯುತ್ತಿಲ್ಲ. ಹಾಗಾಗಿ ಕೇಂದ್ರದ ಮೇಲೆ ಆರೋಪ ಮಾಡುತ್ತಿದ್ದಾರೆ. ಕರ್ನಾಟಕವು 100 ರೂ. ಕೊಟ್ಟರೆ ಕೇವಲ 13 ರೂ. ಬರುತ್ತಿದೆ ಎಂದು ಅರ್ಧಸತ್ಯವನ್ನಷ್ಟೆ ಅವರು ಹೇಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

**ಈಗ ಜ್ಞಾನೋದಯವಾಗಿದಿಯೇ? :** ನಮ ಹೋರಾಟಗಳ ಪರಿಣಾಮವಾಗಿ ಸುಮಾರು 3 ತಿಂಗಳ ಹಿಂದೆ ರಾಜ್ಯ ಸರಕಾರಕ್ಕೆ ಮುಜುಗರ ಆಗುತ್ತಿತ್ತು. ಆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಕಾಂತರಾಜು ವರದಿಯನ್ನು ಅನುಷ್ಠಾನಕ್ಕೆ ತರುವುದಾಗಿ ಹೇಳಿದ್ದರು. ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಮಂಡಿಸುವುದಾಗಿ ಹೇಳಿದರು. 4–5 ಕ್ಯಾಬಿನೆಟ್ ಸಭೆ ಆದರೂ ಅನುಷ್ಠಾನ ಆಗಲಿಲ್ಲ. 10 ವರ್ಷ ಕಳೆದಿದ್ದು, ಅಂಕಿಅಂಶಗಳು ಅವೈಜ್ಞಾನಿಕ. ಇದನ್ನು ತರಾತುರಿಯಲ್ಲಿ ಮಾಡಬಾರದು. ಹೊಸದಾಗಿ ಮಾಡಬೇಕಿದೆ ಎಂದು ಹೇಳಿದರು.

ಕಾಂಗ್ರೆಸ್ಸಿನ ಡಿ.ಕೆ.ಶಿವಕುಮಾರ್ ಸೇರಿ ಸಚಿವರೂ ವಿರೋಧ ವ್ಯಕ್ತಪಡಿಸಿದ್ದರು. ಇದರ ನಡುವೆ ಈಗ ಅವರಿಗೆ ಜ್ಞಾನೋದಯವಾಗಿದೆ. ಯಾವಾಗ ಆರ್ ಸಿ ಬಿ ವಿಜಯೋತ್ಸವದ ಕಾಲ್ತುಳಿತದಲ್ಲಿ 11 ಜನರು ಮೃತಪಟ್ಟರೋ, ಈಗ ವಿಷಯಾಂತರ ಮಾಡಲು ಜಾತಿ ಗಣತಿ ವಿಷಯ ಪ್ರಸ್ತಾಪಿಸಿದ್ದಾರೆ. ಅಂತಿಮವಾಗಿ ಈ ವಿಷಯದಲ್ಲಿ ಇವರು ಏನೂ ಮಾಡಲು ಸಾಧ್ಯವಿಲ್ಲ.

ಕೇಂದ್ರವು ಈಗಾಗಲೇ ಜನ ಗಣತಿ, ಜಾತಿ ಜನಗಣತಿ ಮಾಡುವುದಾಗಿ ಘೋಷಿಸಿದೆ. ಜಾತಿ ಗಣತಿಯು ರಾಜ್ಯ ಸರಕಾರದ ಪರಿಮಿತಿಗೆ ಬರುತ್ತದೆಯೇ ಎಂಬ ಅನುಮಾನಗಳು ಹೆಚ್ಚಾಗಿವೆ. ಗೊಂದಲ ಸೃಷ್ಟಿಸಲು ಇದನ್ನು ಮಾಡುತ್ತಿದ್ದಾರೆ. ತಾರ್ಕಿಕ ಅಂತ್ಯಕ್ಕೆ ಒಯ್ಯುವ ಮನಸ್ಸು ರಾಜ್ಯ ಸರ್ಕಾರ– ಸಿದ್ದರಾಮಯ್ಯನವರಿಗೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

ಯುವ ಮಾರ್ಗ

ಭಾನುವಾರ : 15–06–2025

# ಏರ್ ಇಂಡಿಯಾ ವಿಮಾನ ದುರಂತದ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಿದ ಕೇಂದ್ರ ಸರ್ಕಾರ

**ನವದೆಹಲಿ, ಜೂ.14–** ಗುಜರಾತ್‌ನ ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪ್ರಕರಣದ ತನಿಖೆಗಾಗಿ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ಮುಂದಿನ ದಿನಗಳಲ್ಲಿ ಈ ರೀತಿಯ ದುರಂತಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು ಪ್ರಮಾಣಿತ ನಿರ್ವಹಣಾ ಮಾರ್ಗಸೂಚಿಗಳನ್ನು ರೂಪಿಸಲು ಆದೇಶಿಸಿದೆ.

ಕೇಂದ್ರ ಗೃಹ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ, ಕೇಂದ್ರ ಗೃಹ ಇಲಾಖೆಯ ಹೆಚ್ಚುವರಿ ಅಥವಾ ಜಂಟಿ ಕಾರ್ಯದರ್ಶಿ, ಗುಜರಾತ್ ಸರ್ಕಾರದ ಗೃಹ ಕಾರ್ಯದರ್ಶಿ, ಗೃಹ ಇಲಾಖೆಯ ಮುಖ್ಯಸ್ಥರು, ಗುಜರಾತ್‌ನ ಪ್ರಕೃತಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರತಿನಿಧಿ, ಅಹಮ್ಮದಾಬಾದ್ ಪೊಲೀಸ್ ಆಯುಕ್ತರು, ಭಾರತೀಯ ವಾಯುಪಡೆಯ ತಪಾಸಣೆ ಮತ್ತು ಸುರಕ್ಷತೆಯ ಮಹಾ ನಿರ್ದೇಶಕರು, ನಾಗರಿಕ ವಿಮಾನಯಾನ ಸುರಕ್ಷತಾ ದಳದ ಮಹಾ ನಿರ್ದೇಶಕರು, ವಿಶೇಷ ನಿರ್ದೇಶಕರು, ಕೇಂದ್ರ ಸರ್ಕಾರದ ವಿಧಿವಿಜ್ಞಾನ ವಿಭಾಗದ ನಿರ್ದೇಶಕರು ಮತ್ತು ಇತರರನ್ನು ಸಮಿತಿಗೆ ಸದಸ್ಯರನ್ನಾಗಿ ನಿಯೋಜಿಸಲಾಗುತ್ತಿದೆ ಎಂದು ಕೇಂದ್ರ ಗೃಹ ಇಲಾಖೆಯ ಜಂಟಿ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಉನ್ನತಾಧಿಕಾರ ಸಮಿತಿಗೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವ ಅಧಿಕಾರವನ್ನು ನೀಡಲಾಗಿದೆ. ವಿಮಾನದ




ದತ್ತಾಂಶಗಳು, ಕಾಟ್ ಫಿಟ್‌ನ ವಾಯ್ಸ್ ರೆಕಾರ್ಡ್, ವಿಮಾನದ ನಿರ್ವಹಣೆಯ ದಾಖಲಾತಿಗಳು, ವಿಮಾನಯಾನ ಸಂಚಾರಿ ನಿರ್ವಹಣೆಯ ದಾಖಲಾತಿಗಳು, ಸ್ಥಳ ಪರಿಶೀಲನೆ, ಸಿಬ್ಬಂದಿಗಳ ವಿಚಾರಣೆ, ವಿಮಾನ ಸಂಚಾರ ನಿರ್ವಹಣೆ ನಿಯಂತ್ರಕರು ಹಾಗೂ ಸಂಬಂಧಪಟ್ಟವರಿಂದ ಮಾಹಿತಿ ಪಡೆಯುವುದು, ವಿದೇಶಿ ಸಂಸ್ಥೆಗಳಿಂದ ಅಗತ್ಯ ನೆರವು ಪಡೆಯಲು ಹಾಗೂ ಬೋಯಿಂಗ್ ವಿಮಾನ ತಯಾರಿಕಾ ವಿದೇಶಿ ಸಂಸ್ಥೆಯ ವಿವರಣೆ ಪಡೆಯಲು ಸಹ ಅವಕಾಶ ಕಲ್ಪಿಸಲಾಗಿದೆ.

ವಿಚಾರಣಾ ವರದಿಯನ್ನು ಸಲ್ಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಈ ಸಮಿತಿ ಪ್ರಮುಖವಾಗಿ ವಿಮಾನ ಪತನದ ಕಾರಣವನ್ನು ಪತ್ತೆ ಹಚ್ಚಲಿದೆ. ವಿಮಾನದಲ್ಲಿ ತಾಂತ್ರಿಕ ದೋಷಗಳಿದ್ದವೆ. ಮಾನವ ಸೃಷ್ಟಿತ ದೋಷಗಳಾಗಿದ್ದವೆ. ಹವಾಮಾನ ವೈಪರೀತ್ಯವೇ, ಸಂಬಂಧಪಟ್ಟವರ ನಿರ್ದೇಶನದಲ್ಲಿ ವೈಫಲ್ಯವಿತ್ತೇ ಹಾಗೂ ಇತರ ಕಾರಣಗಳನ್ನು ಪರಿಶೀಲಿಸಲಿದೆ.ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆಗಳನ್ನು ತಪ್ಪಿಸಲು ಕೈಗೊಳ್ಳಬೇಕಾದ ಪ್ರಮಾಣಿತ ನಿರ್ವಹಣಾ ಪ್ರಕ್ರಿಯೆಗಳ (ಎಸ್‌ಓಪಿ) ರೂಪಿಸುವ ಕುರಿತು ಸಮಿತಿ ಸಲಹೆ ಮಾಡಬೇಕಿದೆ.ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನುಸರಿಸುತ್ತಿರುವ ಉತ್ತಮ ಅಭ್ಯಾಸಗಳನ್ನು ಅಧ್ಯಯನ ನಡೆಸಿ ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿವರಣೆ ನೀಡಲಿದೆ.

ಏರ್ ಇಂಡಿಯಾ ವಿಮಾನ ಪತನವಾಗಿ 241ಕ್ಕೂ ಹೆಚ್ಚು ಮಂದಿ ಮೃತಪಟ್ಟ ಘಟನೆಯಲ್ಲಿ ತ್ವರಿತ ರಕ್ಷಣಾ ಕಾರ್ಯಗಳ ವೈಫಲ್ಯವಾಗಿತ್ತೇ?, ಸ್ಥಳಕ್ಕೆ ಕೇಂದ್ರ ಮತ್ತು ರಾಜ್ಯ ರಕ್ಷಣಾ ದಳಗಳು ಧಾವಿಸುವಲ್ಲಿ ವಿಳಂಬವಾಯಿತೆ?, ರಕ್ಷಣಾ ಕಾರ್ಯಾಚರಣೆ ತಡವಾಗಿದ್ದೇಕೆ?, ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮನ್ವಯತೆ ಸಮರ್ಪಕವಾಗಿತ್ತೇ? ಎಂಬುದನ್ನು ಪರಿಶೀಲಿಸಬೇಕಿದೆ. ಇಂತಹ ದುರ್ಘಟನೆಗಳನ್ನು ನಿರ್ವಹಣೆ ಮಾಡುವಲ್ಲಿ ಸೂಕ್ತ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೇ?, ಈ ಹಿಂದೆ ದೇಶದಲ್ಲಿ ವಿಮಾನ ಪತನಗಳಾದಾಗ ಯಾವೆಲ್ಲಾ ಕ್ರಮಗಳನ್ನು ಅನುಸರಿಸಲಾಗಿದೆ. ಮುಂದಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಘಟನೋತ್ತರದಲ್ಲಿ ಅನುಸರಿಸಬೇಕಾದ ಪ್ರಮಾಣಿತ ಮಾರ್ಗಸೂಚಿಗಳನ್ನು ಉನ್ನತಾಧಿಕಾರಿ ಸಮಿತಿ ಪರಿಶೀಲಿಸಲಿದೆ. ನಿಯಮಾವಳಿಗಳ ಬದಲಾವಣೆ, ನಿರ್ವಹಣಾ ಸುಧಾರಣೆ, ತರಬೇತಿ ಹೆಚ್ಚಳದಂತಹ ವಿಚಾರಗಳ ಬಗ್ಗೆಯೂ ಕೇಂದ್ರ ಸರ್ಕಾರ ವರದಿ ಕೇಳಿದೆ.

# ಭಾರತದ ಕ್ಷಮೆ ಯಾಚಿಸಿದ ಇಸ್ರೇಲ್ ಮಿಲಿಟರಿ ಪಡೆ




**ಜೆರುಸಲೆಮ್, ಜೂ.14–** ಭಾರತೀಯ ಸಾಮಾಜಿಕ ಮಾಧ್ಯಮ ಬಳಕೆದಾರರ ಆಕ್ಷೇಪಣೆಗಳ ನಂತರ, ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನದ ಭಾಗವಾಗಿ ತಪ್ಪಾಗಿ ಚಿತ್ರಿಸಿದ ನಕ್ಷೆಯನ್ನು ಪೋಸ್ಟ್ ಮಾಡಿದ್ದಕ್ಕಾಗಿ ಇಸ್ರೇಲಿ ಮಿಲಿಟರಿ ಕ್ಷಮೆಯಾಚಿಸಿದೆ.ಚಿತ್ರವು ಗಡಿಗಳನ್ನು ನಿಖರವಾಗಿ ಚಿತ್ರಿಸಲು ವಿಫಲವಾಗಿದೆ ಎಂದು ಸ್ಪಷ್ಟಪಡಿಸಿದೆ.

ಇರಾನಿನ ಕ್ಷಿಪಣಿಗಳ ವ್ಯಾಪ್ತಿಯನ್ನು ತೋರಿಸಲು ಇಸ್ರೇಲಿ ರಕ್ಷಣಾ ಪಡೆಗಳು (ಐಡಿಎಫ್) ಶುಕ್ರವಾರ ತಮ್ಮ ಎಕ್ಸ್ ಹ್ಯಾಂಡಲ್ ನಲ್ಲಿ ನಕ್ಷೆಯನ್ನು ಪೋಸ್ಟ್ ಮಾಡಿತ್ತು. ಈ ಪೋಸ್ಟ್ ಭಾರತದಲ್ಲಿನ ಸಾಮಾಜಿಕ ಮಾಧ್ಯಮ ಬಳಕೆದಾರರಿಂದ ತ್ವರಿತವಾಗಿ ಟೀಕೆಗೆ ಗುರಿಯಾಯಿತು.

ಭಾರತ ಏಕೆ ತಟಸ್ಥವಾಗಿದೆ ಎಂದು ಈಗ ನಿಮಗೆ ಅರ್ಥವಾಗಿದೆ. ರಾಜತಾಂತ್ರಿಕತೆಯಲ್ಲಿ, ಯಾರೂ ನಿಜವಾಗಿಯೂ ನಿಮ್ಮ ಸ್ನೇಹಿತರಲ್ಲ ಎಂದು ಒಬ್ಬ ಬಳಕೆದಾರರು ಎಕ್ಸ್ ನಲ್ಲಿ ಕಾಮೆಂಟ್ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ, ನಕ್ಷೆಯು ಗಡಿಗಳನ್ನು ನಿಖರವಾಗಿ ಚಿತ್ರಿಸಲು ವಿಫಲವಾಗಿದೆ ಎಂದು ಐಡಿಎಫ್ ಒಪ್ಪಿಕೊಂಡಿತು.

ಈ ಪೋಸ್ಟ್ ಪ್ರದೇಶದ ವಿವರಣೆಯಾಗಿದೆ. ಈ ನಕ್ಷೆಯು ಗಡಿಗಳನ್ನು ನಿಖರವಾಗಿ ಚಿತ್ರಿಸಲು ವಿಫಲವಾಗಿದೆ. ಈ ಚಿತ್ರದಿಂದ ಉಂಟಾದ ಯಾವುದೇ ಅಪರಾಧಕ್ಕೆ ನಾವು ಕ್ಷಮೆಯಾಚಿಸುತ್ತೇವೆ ಎಂದು ಐಡಿಎಫ್ ಎಕ್ಸ್ ನಲ್ಲಿ ಹೇಳಿದೆ. ಇರಾನ್ ಜಾಗತಿಕ ಬೆದರಿಕೆ. ಇಸ್ರೇಲ್ ಅಂತಿಮ ಗುರಿಯಲ್ಲ, ಇದು ಆರಂಭ ಮಾತ್ರ. ನಮಗೆ ಕಾರ್ಯನಿರ್ವಹಿಸುವುದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ ಎಂದು ಐಡಿಎಫ್ ಈ ಹಿಂದೆ ತಪ್ಪಾದ ನಕ್ಷೆಯೊಂದಿಗೆ ಪೋಸ್ಟ್ ಮಾಡಿತು, ಇರಾನ್ ವಿರುದ್ಧ ಆಪರೇಷನ್ ರೈಸಿಂಗ್ ಲಯನ್ ಅನ್ನು ಪ್ರಾರಂಭಿಸುವುದನ್ನು ಸಮರ್ಥಿಸಿತು. ಇಸ್ರೇಲಿ ವಾಯುಪಡೆಯು ಇರಾನಿನ ಕ್ಷಿ ಪಣಿಗಳ ವ್ಯಾಪ್ತಿಯನ್ನು ತೋರಿಸುವ ಇದೇ ರೀತಿಯ ನಕ್ಷೆಯನ್ನು ಹೊಂದಿರುವ ಕಿರು ವೀಡಿಯೊವನ್ನು ಸಹ ಪೋಸ್ಟ್ ಮಾಡಿದೆ. ವಿವಾದಕ್ಕೆ ಪ್ರತಿಕ್ರಿಯೆಯಾಗಿ, ಭಾರತದಲ್ಲಿನ ಇಸ್ರೇಲಿ ರಾಯಭಾರಿ ರುವೆನ್ ಅಜರ್ ನಲ್ಲಿ ನಕ್ಷೆಯನ್ನು ಕೆಟ್ಟ ಉದ್ದೇಶವಿಲ್ಲದ ಇನ್ಫೋಗ್ರಾಫಿಕ್ಸ್ ಎಂದು ಬಣ್ಣಿಸಿದ್ದಾರೆ.

ನಕ್ಷೆಯನ್ನು ತೆಗೆದುಹಾಕಲು/ಸರಿಪಡಿಸಲು ತಾನು ಈಗಾಗಲೇ ಕೇಳಿಕೊಂಡಿದ್ದೇನೆ ಎಂದು ಅವರು ಹೇಳಿದರು.ಲಡಾಖ್ ಜೊತೆಗೆ ಜಮ್ಮು ಮತ್ತು ಕಾಶ್ಮೀರವು ದೇಶದ ಅವಿಭಾಜ್ಯ ಅಂಗವಾಗಿದೆ ಎಂದು ಭಾರತ ನಿರಂತರವಾಗಿ ಸಮರ್ಥಿಸಿಕೊಂಡಿದೆ.

# ಮುಂಗಾರು ಆರ್ಭಟ ಇನ್ನೂ 3 ದಿನ ಭಾರಿ ಮಳೆ

**ಬೆಂಗಳೂರು, ಜೂ.14–** ನೈರುತ್ಯ ಮುಂಗಾರು ಮಳೆ ಕರಾವಳಿ. ಮಲೆನಾಡು ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿ ಆರ್ಭಟಿಸುತ್ತಿದ್ದು, ಹಲವೆಡೆ ಭಾರಿ ಮಳೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ ಚದುರಿದಂತೆ ಮಳೆ ಬಿದ್ದಿದ್ದು, ಇನ್ನೂ ಮೂರು ದಿನಗಳ ಕಾಲ ಇದೇ ರೀತಿ ಮಳೆ ಮುಂದುವರೆಯಲಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಿಗೆ ಭಾರಿ ಮಳೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಬೆಳಗಾವಿ, ಧಾರವಾಡ, ಹಾವೇರಿ, ಹಾಸನ ಜಿಲ್ಲೆಗಳಿಗೆ ಆರೇಂಜ್ ಅಲರ್ಟ್ ನೀಡಿದ್ದು, ಮುನ್ನೆಚ್ಚರಿಕೆ ವಹಿಸಲು ಸಲಹೆ ಮಾಡಿದೆ.

ಕಳೆದ ಒಂದು ವಾರದಿಂದ ರಾಜ್ಯದಲ್ಲಿ ಮುಂಗಾರು ಚುರುಕಾಗಿದ್ದು, ಮಳೆಯ ಪ್ರಮಾಣ ಹೆಚ್ಚಾಗಿದೆ. ನಿನ್ನೆ ಆಗುಂಬೆಯಲ್ಲಿ 11 ಸೆಂ.ಮೀ.ನಷ್ಟು ಭಾರಿ ಮಳೆಯಾಗಿದೆ.ಹವಾಮಾನ ಇಲಾಖೆ ಬೆಂಗಳೂರು ಪ್ರಾದೇಶಿಕ ಕೇಂದ್ರದ ಮಾಹಿತಿ ಪ್ರಕಾರ ಮಂಗಳೂರಿನಲ್ಲಿ 9 ಸೆಂ.ಮೀ., ಉಡುಪಿ 8 ಸೆಂ.ಮೀ., ಉಪ್ಪಿನಂಗಡಿ, ಗೇರುಸೊಪ್ಪ,ಭಟ್ಕಳ, ಪಣಂಬೂರು, ಬಸವನ ಬಾಗೇವಾಡಿ, ಬೆಳ್ತಂಗಡಿಗಳಲ್ಲಿ ತಲಾ 7 ಸೆಂ.ಮೀ.. ಸಿದ್ದಾಪುರ, ಮಾಣಿ, ಕುಂದಾಪುರ, ಗೋಕರ್ಣ. ಪುತ್ತೂರುಗಳಲ್ಲಿ ತಲಾ 6 ಸೆಂ.ಮೀ.. ಕೋಟಾ. ಮೂಡುಬಿದರೆ, ಕಾರ್ಕಳದಲ್ಲಿ ತಲಾ 5 ಸೆಂ.ಮೀ.ನಷ್ಟು ಮಳೆಯಾಗಿದೆ.

ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮ ರಾಜ್ಯದಲ್ಲಿ



ಮೋಡ ಕವಿದ ವಾತಾವರಣ ಕಂಡು ಬರಲಿದ್ದು, ಇನ್ನೂ ಮೂರು ದಿನಗಳ ಕಾಲ ಭಾರಿ ಮಳೆಯಾಗುವ ಮುನ್ಸೂಚನೆಗಳಿವೆ.

ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಆಗಾಗ್ಗೆ ತಂಪಾದ ಬಲವಾದ ಮೇಲೆ ಗಾಳಿ ಬೀಸಲಿದೆ. ಕೆಲವೆಡೆ ಆಗಾಗ್ಗೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ.

# ಜೂ.19 ಶುಕ್ಲಾ ಬಾಹ್ಯಾಕಾಶ ಪ್ರಯಾಣ

**ನವದೆಹಲಿ.ಜೂ14–** ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರ ಎಎಕ್ಸ್ –4 ಮಿಷನ್ ಅನ್ನು ಅನಿರ್ದಿಷ್ಟವಾಗಿ ಮುಂದೂಡಿದ ನಂತರ, ಇಸ್ರೋ ಹೊಸ ಉಡಾವಣಾ ದಿನಾಂಕವನ್ನು ಘೋಷಿಸಿದೆ.

ಜೂನ್ 19, 2025 ರಂದು ಅಧಿಕೃತವಾಗಿ ಉಡಾವಣೆಯಾಗಲಿರುವ ಆಕ್ಸಿಯಮ್ –4 (ಎಎಕ್ಸ್ –04) ಮಿಷನ್ ನಲ್ಲಿ ಶುಕ್ಲಾ ಬಾಹ್ಯಾಕಾಶಕ್ಕೆ ತಮ್ಮ ಮೊದಲ ಸಮುದ್ರಯಾನಕ್ಕೆ ತಯಾರಿ ನಡೆಸುತ್ತಿದ್ದಾರೆ. ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್ ಎಕ್ಸ್ ನ ವಿಶ್ವಾಸಾರ್ಹ ಫಾಲ್ಕನ್ 9 ರಾಕೆಟ್ ಮೂಲಕ ಈ ಮಿಷನ್ ಉಡಾವಣೆಯಾಗಲಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಆಕ್ಸಿಯಮ್ ಸ್ಪೇಸ್ ಮತ್ತು ಸ್ಪೇಸ್ ಎಕ್ಸ್ ನಡುವಿನ ನಿರ್ಣಾಯಕ ಸಮನ್ವಯ ಸಭೆಯ ನಂತರ ಉಡಾವಣಾ ದಿನಾಂಕದ ದೃಢೀಕರಣ ನಡೆಯಲಿದೆ.


ಸಭೆಯಲ್ಲಿ, ಅಧಿಕಾರಿಗಳು ಇತ್ತೀಚಿನ ತಾಂತ್ರಿಕ ಕಳವಳಗಳನ್ನು ಪ್ರಸ್ತಾಪಿಸಿದರು, ವಿಶೇಷವಾಗಿ ಫಾಲ್ಕನ್ 9 ಉಡಾವಣಾ ವಾಹನದಲ್ಲಿ ಈ ಹಿಂದೆ ಪತ್ತೆಯಾದ ದ್ರವ ಆಮ್ಲಜನಕ ಸೋರಿಕೆ.ಸ್ಪೇಸ್ ಎಕ್ಸ್ ಎಂಜಿನಿಯರ್‌ಗಳು ಸಮಸ್ಯೆಯನ್ನು ಪರಿಹರಿಸಿದ್ದಾರೆ, ರಾಕೆಟ್ ತನ್ನ ಮುಂದಿನ ಮಹತ್ವಾಕಾಂ



ಕ್ಷೆಯ ಕಾರ್ಯಾಚರಣೆಗೆ ಸಿದ್ಧವಾಗಿದೆ ಎಂದು ಖಚಿತಪಡಿಸಿದ್ದಾರೆ.

ಭಾರತೀಯ ವಾಯುಪಡೆಯ ಪೈಲಟ್ ಮತ್ತು ಇಸ್ರೋದ ಹೊಸ ಗಗನಯಾತ್ರಿಯಾಗಿರುವ ಶುಕ್ಲಾ ಅವರು ಎಎಕ್ಸ್ –04 ಮಿಷನ್ ಗಾಗಿ ಅಂತರರಾಷ್ಟ್ರೀಯ ತಂಡವನ್ನು ಸೇರಿಕೊಳ್ಳಲಿದ್ದಾರೆ. ಇದು ಭಾರತದ ಮಾನವ ಬಾಹ್ಯಾಕಾಶ ಯಾನ ಕಾರ್ಯಕ್ರಮಕ್ಕೆ ಮಹತ್ವದ ಮೈಲಿಗಲ್ಲಾಗಿದೆ, ಏಕೆಂದರೆ ಶುಕ್ಲಾ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಪ್ರಯಾಣಿಸುವ ಕೆಲವೇ ಭಾರತೀಯರಲ್ಲಿ ಒಬ್ಬರಾಗಿದ್ದಾರೆ.ಏತನ್ಮಧ್ಯೆ, ಆಕ್ಸಿಯೋಮ್ ಸ್ಪೇಸ್ ಪ್ರತ್ಯೇಕ ಸಮಸ್ಯೆಯನ್ನು ಮೇಲ್ವಿಚಾರಣೆ ಮಾಡಲು ನಾಸಾದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ.

# ನಕಲಿ ನೋಟುಗಳ ಮುದ್ರಿಸುತ್ತಿದ್ದ ಆರೋಪದಲ್ಲಿ ಉದ್ಯಮಿ ಪುತ್ರನ ಬಂಧನ



**ಬೆಂಗಳೂರು, ಜೂ.14–**ಶೋಕಿ ಜೀವನಕ್ಕಾಗಿ ಹಣ ಹೊಂದಿಸಲು ಖೋಟಾ ನೋಟು ತಯಾರಿಸಿದ ಟೆಕ್ಸ್ ಟೈಲ್ ಉದ್ಯಮಿಯೊಬ್ಬರ ಪುತ್ರ ಕ್ರಿಷ್‌ಮಾಲಿ (23) ನನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.ಉದ್ಯಮಿ ಪುತ್ರ ಪಾರ್ಟಿ ಮಾಡುವುದು, ಟ್ರಿಪ್‌ಗೆ ಹೋಗುವುದು ಹೀಗೆ ವಿನಾಕಾರಣ ಸುತ್ತಾಡುತ್ತಾ ದುಂದುವೆಚ್ಚ ಮಾಡುತ್ತಿದ್ದರಿಂದ ಮನೆಯಲ್ಲಿ ಖರ್ಚಿಗೆ ಹಣ ಕೊಡುತ್ತಿರಲಿಲ್ಲ.

ಹೇಗಾದರೂ ಮಾಡಿ ಹಣ ಹೊಂದಿಸಬೇಕೆಂದು ಯೋಚಿಸುತ್ತಿದ್ದಾಗ ಆತನಿಗೆ ಹೊಳೆದಿದ್ದೇ ನಕಲಿ ನೋಟು ತಯಾರಿಸುವ ದುರಾಲೋಚನೆ. ಅದಕ್ಕಾಗಿ ಆತ ಪ್ರಿಂಟರ್ ಸ್ಕ್ಯಾನರ್, ಹಾಗೂ ಪೇಪರ್‌ಗಳನ್ನು ಖರೀದಿಸಿದ್ದಾನೆ. ನಕಲಿ ನೋಟನ್ನು ಯಾವ ಜಾಗದಲ್ಲಿ ತಯಾರಿಸಬಹುದೆಂದು ಆಲೋಚಿಸಿ ಆನ್‌ಲೈನ್ ಮೂಲಕ ಕಮರ್ಷಿಯಲ್ ಸ್ಟ್ರೀಟ್‌ನ ಹೋಟೇಲ್ ಒಂದರಲ್ಲಿ ರೂಂ ಬುಕ್ ಮಾಡಿದ್ದಾನೆ.ಜೂ.4 ರಂದು ರೂಂ ಬಾಡಿಗೆಗೆ ಪಡೆದುಕೊಂಡು, ಆ ರೂಂ ನಲ್ಲಿ 500 ರೂ.ಮುಖಬೆಲೆಯ ನೋಟುಗಳನ್ನು ಪ್ರಿಂಟ್ ಮಾಡಿದ್ದಾನೆ. ಪ್ರಿಂಟ್ ವೇಳೆ ಹಾಳಾದ ನೋಟುಗಳನ್ನು ರೂಂ ನಲ್ಲಿದ್ದ ಕಸದ ಬುಟ್ಟಿಗೆ ಹಾಕಿದ್ದಾನೆ. ಜೂ.7 ರಂದು ರೂಂ ಖಾಲಿ ಮಾಡುವಾಗ 500 ರೂ. ಮುಖಬೆಲೆಯ 6 ನಕಲಿ ನೋಟುಗಳನ್ನು (3000) ಮ್ಯಾನೇಜರ್‌ಗೆ ನೀಡಿ ತೆರಳಿದ್ದಾನೆ. ಹೋಟೇಲ್ ಮ್ಯಾನೇಜರ್ ಸಂಗ್ರಹವಾಗಿದ್ದ ಹಣವನ್ನು ಬ್ಯಾಂಕಿಗೆ ಕಟ್ಟಲು ಹೋದಾಗ 6 ನೋಟುಗಳು ಖೋಟಾ ನೋಟುಗಳೆಂದು ಬ್ಯಾಂಕ್‌ನವರು ವಾಪಸ್ ಕೊಟ್ಟಿದ್ದಾರೆ. ಆ ವೇಳೆ ಹೋಟೇಲ್ ಮ್ಯಾನೇಜರ್‌ಗೆ ಅನುಮಾನ ಬಂದಿದೆ. ಈ ಹಣ ಯಾರು ಕೊಟ್ಟಿರಬಹುದೆಂದು ಯೋಚಿಸುತ್ತಿದ್ದಾಗ, ಹೋಟೇಲ್ ರೂಂ ಬಾಯ್ ಕಸದ ಬುಟ್ಟಿಯಲ್ಲಿದ್ದ ಖೋಟಾ ನೋಟಿನ ಚೂರುಗಳನ್ನು ತಂದು ಮ್ಯಾನೇಜರ್‌ಗೆ ತೋರಿಸಿದ್ದಾನೆ. ಆ ರೂಂ ನಲ್ಲಿ ಯಾರು ಉಳಿದುಕೊಂಡಿದ್ದರು ಎಂಬ ಬಗ್ಗೆ ದಾಖಲೆ ಪರಿಶೀಲಿಸಿದಾಗ ಆನ್‌ಲೈನ್‌ನಲ್ಲಿ ಬುಕ್ ಮಾಡಿದ್ದ ಉದ್ಯಮಿ ಪುತ್ರನ ಆಧಾರ್‌ಕಾರ್ಡ್ ಲಭ್ಯವಾಗಿದೆ. ತಕ್ಷಣ ಕಮರ್ಷಿಯಲ್ ಸ್ಟ್ರೀಟ್ ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇದೀಗ ಆತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. 500 ರೂ. ಮುಖಬೆಲೆ ಎಷ್ಟು ನೋಟುಗಳನ್ನು ಮುದ್ರಿಸಲಾಗಿದೆ. ಆ ನೋಟುಗಳನ್ನು ಎಲ್ಲೆಲ್ಲಿ ಎಷ್ಟು ನೋಟುಗಳನ್ನು ಚಲಾವಣೆ ಮಾಡಲಾಗಿದೆ, ನಕಲಿ ನೋಟು ಮುದ್ರಿಸುವ ಐಡಿಯಾ ಯಾರು ಕೊಟ್ಟವರು ಎಂಬಿತ್ಯಾದಿ ಮಾಹಿತಿಗಳನ್ನು ಪೊಲೀಸರು ಪಡೆದುಕೊಳ್ಳುತ್ತಿದ್ದಾರೆ.

# ಹಿಂದೂಗಳ ನಿಗ್ರಹಕ್ಕೆ ಕೋಮು ನಿಗ್ರಹ ದಳ

**ಬೆಂಗಳೂರು,ಜೂ14–**ರಾಜ್ಯ ಕಾಂಗ್ರೆಸ್ ಸರ್ಕಾರ ಮಂಗಳೂರಿನಲ್ಲಿ ಕೋಮು ನಿಗ್ರ ಹ ದಳಕ್ಕೆ ಚಾಲನೆ ನೀಡಿರುವುದಕ್ಕೆ ಟೀಕಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಇದು ಹಿಂದೂಗಳನ್ನ ಬೆದರಿಸುವ ತಂತ್ರ ಎಂದು ಲೇವಡಿ ಮಾಡಿದ್ದಾರೆ. ಈ ಕುರಿತು ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಬಿವೈ ವಿಜಯೇಂದ್ರ, ಇದು ಕೋಮು ನಿಗ್ರಹ ದಳ ಅಲ್ಲ. ಹಿಂದೂಗಳನ್ನ ಬೆದರಿಸುವ ತಂತ್ರ. ಇದಕ್ಕೆ ನಾವು ಬಗ್ಗಲ್ಲ. ಎಲ್ಲವನ್ನೂ ಎದುರಿಸುತ್ತೇವೆ ಎಂದರು. ಕೇಂದ್ರದಿಂದ ಅನುದಾನ ತಾರತಮ್ಯ ಆರೋಪಕ್ಕೆ



ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಬಿವೈ ವಿಜಯೇಂದ್ರ, ದೆಹಲಿಯಲ್ಲಿ ಸಿಎಂ ಅರ್ಧ ಸತ್ಯ ಹೇಳಿದ್ದಾರೆ ಸಿಎಂ ಆರೋಪಗಳು ಸತ್ಯವಲ್ಲ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಆರೋಪ ಮಾಡಿದ್ದಾರೆ. ಕೇಂದ್ರದ ಮೇಲೆ ಗೂಬೆ ಕೂರಿಸುವ ಯತ್ನ ಮಾಡಿದ್ದಾರೆ ಗ್ಯಾರಂಟಿಗಳಿಗೆ ಹಣ ಇಲ್ಲ. ಸಿಎಂ ನೋಡಿದ್ರೆಪಾಪ ಎನ್ನಿಸುತ್ತೆ. ಕೇಂದ್ರದ ಯೋಜನೆಗಳಿಗೂ ಕತ್ತರಿ ಹಾಕಲಾಗಿದೆ ಎಂದು ಆರೋಪಿಸಿದರು.

# ಟೊಮೆಟೋ, ಮಾವು ಬೆಳೆ ಬೆಂಬಲ ಬೆಲೆ ಘೋಷಣೆಗೆ ಬಿಜೆಪಿ ಆಗ್ರಹ

**ಕೋಲಾರ, ಜೂ,14–** ಜಿಲ್ಲೆಯಲ್ಲಿ ರೈತರು ಅತಿಹೆಚ್ಚಾಗಿ ಬೆಳೆಯುವಂತ ಟೊಮೆಟೊ ಮತ್ತು ಮಾವು ಬೆಳೆಗಳ ಬೆಲೆಗಳು ಪಾತಳಕ್ಕೆ ಕುಸಿದಿದ್ದು ರೈತರ ಹಾಕಿರುವಂತ ಕನಿಷ್ಠ ಬಂಡಾವಳವು ವಾಪಾಸ್ಸಾಗದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಅದರೆ ಆಡಳಿತರೊಢ ಪಕ್ಷವು ರೈತರ ಬೆನ್ನಲುಬಾಗಿ ನಿಲ್ಲ ಬೇಕಾಗಿರುವುದನ್ನು ಬಿಟ್ಟು ಕುಂಭಕರ್ಣನ ನಿದ್ದೆಗೆ ಜಾರಿರುವುದು ದುರಂತದ ಸಂಗತಿಯಾಗಿದೆ ಎಂದು ರಾಜ್ಯ ಮಾಜಿ ಉಪಮುಖ್ಯ ಮಂತ್ರಿ ಸಿ.ಎನ್. ಅಶ್ವಥ್ ನಾರಾಯಣ ಬೇಸರ ವ್ಯಕ್ತ ಪಡಿಸಿದರು,

ಪಟ್ಟಣದ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಗುರುವಾರ ಮಧ್ಯಾಹ್ನ ಭೇಟಿ ನೀಡಿದ್ದ ಅವರು ಮಾವು ಮತ್ತು ಟೊಮೆಟೊ ಬೆಳೆಗಳ ಬೆಲೆ ತೀವ್ರ ಕುಸಿತದಿಂದಾಗಿ ರೈತರು ಸಂಕಷ್ಟಕ್ಕೆ ತುತ್ತಾಗಿ ನಷ್ಟಕ್ಕೆ ಒಳಗಾಗಿದ್ದಾರೆ. ಈ ಸಂಬಂಧವಾಗಿ ಪದೇ ಪದೇ ಸರ್ಕಾರಕ್ಕೆ ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದು ಬೆಂಲಬೆಲೆ ಘೋಷಿಸಲು ಸಾಕಷ್ಟು ಮನವಿ ಮಾಡಿದರೂ ಸಹ ಸ್ಪಂದಿಸದೆ ನಿರ್ಲಕ್ಷಿಸುತ್ತಿರುವುದು ಅಮಾನವೀಯತೆಯ ಪರಮಾವಧಿಯಾಗಿದೆ ಎಂದು ಕಿಡಿ ಕಾರಿದರು.

ಮಾವು ಒಂದು ಕೆ.ಜೆ.ಗೆ 5 ರೂ ಗಳಿಗೆ ಮಾರಾಟ ಮಾಡ ಬೇಕಾದ ದುರಂತ ಉಂಟಾಗಿದೆ. ಮಾವು ಬಂಡಾವಳ ಸಹ ಬಾರದಂತಾಗಿದ್ದು ಭಾರಿ ನಷ್ಟಕ್ಕೆ ತುತ್ತಾಗುವ ರೈತರು ಸಾಲಗಳ ಭೀತಿಯಿಂದ ಮುಂದೆ ಅನಾಹುತಗಳು ಸಂಭವಿಸುವ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗದು. ಇತ್ತ ಟೊಮೆಟೊ ಬೆಳೆಗೂ ಬೆಲೆ ಹಾಗೂ ಬೇಡಿಕೆಗಳು ಇಲ್ಲವಾಗಿದೆ ಇದಕ್ಕೂ ಸಹ ಬೆಂಬಲ ಬೆಲೆ ನೀಡುತ್ತಿಲ್ಲ. ಹಾಲಿಗೂ ಸಹ ಬೆಂಬಲ ಬೆಲೆಯನ್ನು ಕಳೆದ 5–6 ತಿಂಗಳಿಂದ ಬಾಕಿ ಇರಿಸಿ ಕೊಂಡಿದ್ದು ರೈತರ ವಿರೋಧ ಧೋರಣೆಯನ್ನು ಸರ್ಕಾರವು ತೋರುತ್ತಿರುವುದು ದುರಾದೃಷ್ಟಕಾರವಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ನಾಮಾಕವಸ್ತೆಯಾಗಿ 2–3 ತಿಂಗಳಿಗೊಮ್ಮೆ ದರ್ಶನ ನೀಡುತ್ತಾರೆ ಅವರಿಗೆ ಸಮರ್ಪಕವಾಗಿ ಜಿಲ್ಲಾ ಪರಿಚಯವೇ ಇಲ್ಲವಾಗಿದೆ. ಇನ್ನು ತೋಟಗಾರಿಕೆ ಸಚಿವರಿಗೆ ಈ ಭಾಗ ಎಲ್ಲಿದೆ ಎಂಬುವುದೇ ತಿಳಿದಿಲ್ಲ. ಸರ್ಕಾರಕ್ಕೆ ಹಲವಾರು ಬಾರಿ ಮನವಿ ಸಲ್ಲಿಸುತ್ತಿದ್ದರೂ ಸಹ ಬೆಳೆಗಾರರ ಸಂಕಷ್ಟವನ್ನು ಅರ್ಥ ಮಾಡಿ ಕೊಳ್ಳುವಷ್ಟು ಸಹನೆ, ತಾಳ್ಮೆ ಎಂಬುವುದು ಇಲ್ಲವಾಗಿದೆ ಎಂದು ದೂರಿದರು,ಈ ಹಿಂದೆ ಬಿಜೆಪಿ ಸರ್ಕಾರವು ಎ.ಪಿ.ಎಂ.ಸಿ.ಯಲ್ಲಿ ಸೆಸ್ ಸಂಪೂರ್ಣ ತೆರೆಯಲಾಗಿತ್ತು ಅದರೆ ಈಗಿನ ಕಾಂಗ್ರೆಸ್ ಸರ್ಕಾರ 1 ರೂ ವಿಧಿಸಿದೆ. ಅದರೆ ರೈತರ ಕಡೆ ತಿರುಗಿಯೋ ನೋಡುತ್ತಿಲ್ಲ. ಯಾವುದೇ ರೀತಿ ನೆರವಿಗೂ ಧಾವಿಸುತ್ತಿಲ್ಲ ಎಂದು ಟೀಕಿಸಿದರು.

ಮಾಜಿ ಸಂಸದ ಎಸ್.ಮುನಿಸ್ವಾಮಿ ಮಾತನಾಡಿ ಜಿಲ್ಲಾಧಿಕಾರಿಗಳು ಅಷ್ಟೊ ಇಷ್ಟೊ ರೈತರ ಬಗ್ಗೆ ಕಾಳಜಿವಹಿಸಿ ನೆರೆಯ ಅಂಧ್ರ ಪ್ರದೇಶದ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ರೈತರಿಗೆ ನೆರವು ನೀಡುವ ಮೂಲಕ ನ್ಯಾಯ ದೊರಕಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರೆ ಜಿಲ್ಲಾ ಉಸ್ತುವಾರಿ ಸಚಿವರಂತೂ ಪ್ರಯತ್ನಗಳು ಮಾಡುವುದಿರಲಿ ಕನಿಷ್ಟ ಸ್ಪಂದಿಸುವಂತ ಕಾಳಜಿ ಇಲ್ಲದೆ ಇರುವುದು ಜಿಲ್ಲೆಯ ರೈತರ ದುರಾದೃಷ್ಟಕರವಾಗಿದೆ. ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದ ಜನತೆ ಇಂದು ಪಶ್ಚಾತಾಪ ಪಡುತ್ತಿದ್ದಾರೆ ಎಂದು ಟೀಕಿಸಿದರು. ಸಚಿವ ಸಂಪುಟದಲ್ಲಿ ಮಾವು ಹಾಗೂ ಟಮ್ಯೋಟೋ ಬೆಳೆಗಳಿಗೆ ಕೊಡಲೆ ಬೆಂಬಲ ಬೆಲೆ ಘೋಷಿಸದಿದ್ದರೆ ಬಿಜೆಪಿ ಪಕ್ಷದಿಂ ದ ಉಗ್ರ ಹೋರಾಟಕ್ಕೆ ಮುಂದಾಗಲಿದೆ ಸರ್ಕಾರವು ಮಾವು ಸೀಸನ್ ಮುಗಿದ ಬೆಲೆ ಘೋಷಿಸುವಂತ ಹುನ್ನಾರ ಮಾಡು ತ್ತಿದೆ ಇದರಿಂದ ರೈತರು ಎಚ್ಚತ್ತು ಕೊಳ್ಳಬೇಕು, ಸರ್ಕಾರಕ್ಕೆ ಬಂದ್ ಮಾಡಿದರೆ ಸಾಲದು ಉಗ್ರವಾದ ಹೋರಾಟವನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರದ ಗಮನ ಸೆಳೆಯ ಬೇಕು. ಇದಕ್ಕೆ ಜಿಲ್ಲೆಯ ಸಮಸ್ತ ರೈತರು ಯಾವುದೇ ಜಾತಿ ಧರ್ಮ ಪಕ್ಷ ಬೇಧಗಳಿಲ್ಲದೆ ಹೋರಾದಲ್ಲಿ ಭಾಗವಹಿಸುವ ಮೂಲಕ ಬೆಂಬಲ ನೀಡ ಬೇಕೆಂದು ಕರೆ ನೀಡಿದರು,

ಯುವ ಮಾರ್ಗ

ಭಾನುವಾರ : 15–06–2025

# ಪ್ಲಾಸ್ಟಿಕ್ ನಿಷೇಧಿಸಿ ಗಿಡ–ಮರ ಬೆಳೆಸಿ : ಶರಣಪ್ಪ ಮೇಟಿ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.14–** ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪರಿಸರವನ್ನು ಬೆಳೆಸಿ –ಉಳಿಸಿ ಮತ್ತು ರಕ್ಷಿಸಿ ಪ್ಲಾಸ್ಟಿಕ್ ನಿಷೇಧ ಮಾಡಿ ಎಂದು ಶಾಲೆಯ ಅಧ್ಯಕ್ಷ ಶರಣಪ್ಪ ಮೇಟಿ ಹೇಳಿದರು.

ಪಟ್ಟಣದ ಪಿ.ಬಿ.ಎ ಶಾಲೆಯಲ್ಲಿ ಪರಿಸರ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಸರ ದಿನಾಚರಣೆ ಎಂದರೆ ಬರೀ ಮಾತಾಗಬಾರದು ಕ್ರಿಯೆ ಆಗಬೇಕು, ಪರಿಸರವನ್ನು ಬೆಳೆಸುವ ಕ್ರಿಯೆಯನ್ನು ನಾವು ಜವಾಬ್ದಾರಿತನದಿಂದ ಮಾಡಬೇಕು. ಶಾಲಾವರಣದಲ್ಲಿ ಈ ವರ್ಷಕ್ಕೆ ಸುಮಾರು 50 ರಿಂದ 100 ಸಸಿಗಳನ್ನು ನೆಟ್ಟು ಬೆಳೆಸುವ ಕಿರು ಸೇವೆಯನ್ನು ಮಾಡಬೇಕೆಂದರು.

ಪ್ರಾಂಶುಪಾಲ ಜೇಮ್ಸ್, ಶಾಲಾ ಶಿಕ್ಷಕರು ಮತ್ತು ಪ್ರತಿ ತರಗತಿಯ ಮಾನಿಟಗಳು ಸಸಿಗಳನ್ನು ನೆಟ್ಟರು. 6ನೇ ತರಗತಿಯ ರಿತೇಶ್ ಕಾರ್ಯಕ್ರಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಶಿಕ್ಷಕರಾದ ರವೀಂದ್ರ ಹಿರೇಮಠ, ಮಾರನ್, ಗಂಗಾಧರ್, ವೆಂಕಟೇಶ್, ಕವಿತಾ, ಅನುಷಾ ರೂಪ ಸೇರಿದಂತೆ ಇದ್ದರು.

# ಅಂತಿಮ ತೀರ್ಪಿನವರೆಗೆ ಜನಾರ್ಧನರೆಡ್ಡಿಯವರನ್ನು ಬಿಜೆಪಿಯಿಂದ ಅಮಾನತಿಗೆ: ಟಪಾಲ್ ಮನವಿ

**ಬಳ್ಳಾರಿ:ಜೂ,14–** ಓಎಂಸಿ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಗಂಗಾವತಿ ಶಾಸಕ ಜನಾರ್ಧನರೆಡ್ಡಿಗೆ ಸಿಬಿಐ ನ್ಯಾಯಾಲಯದ ಶಿಕ್ಷೆಯನ್ನು ತೆಲಂಗಾಣ ಹೈ ಕೋರ್ಟ್ ಅಮಾನತ್ತು ಗೊಳಿಸಿದೆ. ಇದಕ್ಕೆ ನಮ್ಮ ವಿರೋಧವಿದೆ.

ಅಂತಿಮವಾಗಿ ಸುಪ್ರೀಂ ಕೋರ್ಟ್ ನಲ್ಲಿ ತೀರ್ಮಾನವಾಗುವವರೆಗೆ ಅವರನ್ನು ಬಿಜೆಪಿಯಿಂದ ಅಮಾನತುಗೊಳಿಸಬೇಕೆಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ಪ್ರಧಾನ ಮಂತ್ರಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಟಪಾಲ್ ಗಣೇಶ್ ಪತ್ರ ಬರೆದಿದ್ದಾರೆ. ನಾವು ನಮ್ಮ ತಂದೆ ಹಲವು ದಶಕಗಳಿಂದ ಬಳ್ಳಾರಿ ಮೀಸಲು ಅರಣ್ಯದಲ್ಲಿ ಮೈನಿಂಗ್ ನಡೆಸಿಕೊಂಡು ಬಂದಿತ್ತು. ಅದನ್ನು 2006ರಲ್ಲಿ ಒಬುಳಾಪುರಂ ಮೈನಿಂಗ್ ಕಂಪನಿ ಆಕ್ರಮಿಸಿಕೊಂಡಿತು. ನಮ್ಮ ತಂದೆ ಅವರು ಕಂಪನಿಯ ನಿರ್ದೇಶಕರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿ ಆರೋಪಗಳು ರೂಪುಗೊಂಡಿವೆ. ಈ ವಿಷಯವು ಸಂಡೂರು ಜೆಎಂಎಫ್‌ಸಿ ನ್ಯಾಯಾಲಯದಲ್ಲಿದೆ. ಜನಾರ್ದನ ರೆಡ್ಡಿ ಅವರು ಬಿಜೆಪಿಯಿಂದ ಸಚಿವರಾದ ನಂತರ ಓಬಳಾಪುರಂ ಮೈನಿಂಗ್ ಕಂಪನಿಯ ನಿರ್ದೇಶಕರೊಂದಿಗೆ ಸೇರಿ, ಪಕ್ಕದ ಲೀಸ್‌ಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು, ಮೈನಿಂಗ್ ಲೀಸ್ ಗಡಿಗಳನ್ನು ಬದಲಾಯಿಸಿ, ಎಂಎಂಡಿಎಂಆರ್ ಕಾಯ್ದೆ, ಎಫ್‌ಸಿ ಕಾಯ್ದೆ, ಇಸಿ ಕಾಯ್ದೆ ಇತ್ಯಾದಿಗಳಂತೆ ಪಡೆಯಲಾಗಿದ್ದ ಲೀಸ್‌ಗಳ ನಿಯಮಗಳನ್ನು ಉಲ್ಲಂಘಿಸಿ, ಅಕ್ರಮವಾಗಿ ಗಣಿಗಾರಿಕೆ ನಡೆಸಿದರು.

ಅವರು ಆಂಧ್ರ ಪ್ರದೇಶದ ಪರವಾನಗಿಗಳ ಮೂಲಕ ಹಾಗೂ ಕರ್ನಾಟಕದ ಲೀಸ್‌ಗಳಿಂದ ಅಕ್ರಮವಾಗಿ ಕಬ್ಬಿಣ ಅದಿರು ಸಾಗಿಸಿದರು.ಸಿಬಿಐ ಚಾರ್ಜ್‌ಷೀಟ್ ಮತ್ತು ತೀರ್ಪಿನಲ್ಲಿ ನಾವು ವಿವಿಧ ನ್ಯಾಯಾಂಗ ವೇದಿಕೆಗಳಲ್ಲಿ ಅಕ್ರಮಗಳನ್ನು ಎತ್ತಿಹಿಡಿಯಲಾಗಿದೆ.ಆದರೂ ರಾಜ್ಯ ಹಾಗೂ ಕೇಂದ್ರದ ಅಧಿಕಾರಿಗಳು ಈ ತೀರ್ಪುಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ.

2008ರಲ್ಲಿ ಜನಾರ್ದನ ರೆಡ್ಡಿ ಅವರು ನಮ್ಮ ಲೀಸ್ ಪ್ರದೇಶದಲ್ಲಿ ನಾವು ಕೆಲಸಕ್ಕೆ ಹೋಗಲು ಅವಕಾಶ ನೀಡಲಿಲ್ಲ, ಅಡಚಣೆ ಮಾಡಿದರು ಹಾಗೂ ಅಕ್ರಮ ಗಣಿಗಾರಿಕೆ ನಡೆಸಿ 29 ಲಕ್ಷ ಮೆಟ್ರಿಕ್ ಟನ್ ಕಬ್ಬಿಣ ಅದಿರನ್ನು ಎಂ.ಬಿ.ಟಿ., ಹಿಂದ್ ಟ್ರೇಡರ್ಸ್, ಟಿ.ನಾರಾಯಣ ರೆಡ್ಡಿ, ಎನ್.ರತ್ನಯ್ಯ ಗಣಿ ಪ್ರದೇಶಗಳಿಂದ ಸಾಗಿಸಿದರು.

ಭಾರತ ಸಂವಿಧಾನದ ವಿಧಿ 191 ಮತ್ತು 1951ರ ಜನ ಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 8 ಪ್ರಕಾರ, ಶಾಸಕರು ಅಕ್ರಮ ಗಣಿಗಾರಿಕೆ ಅಥವಾ ಹಾನಿಕಾರಕ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ಸದಸ್ಯತ್ವವೇ ರದ್ದಾಗಬಹುದು. ಸಂಸದರು ಮತ್ತು ಶಾಸಕರು ಭಾರತ ಸಂವಿಧಾನ ಮತ್ತು ಕಾನೂನುಗಳನ್ನು ಪಾಲಿಸಲು ಮತ್ತು ನೈಸರ್ಗಿಕ ಸಂಪತ್ತುಗಳನ್ನು ರಕ್ಷಿಸಲು ಪ್ರಮಾಣ ವಚನ ತೆಗೆದುಕೊಳ್ಳುತ್ತಾರೆ. ಈ ಪ್ರಮಾಣವನ್ನು ಉಲ್ಲಂಘಿಸುವುದು ಜನರ ನಂಬಿಕೆಗೆ ಧಕ್ಕೆ ತರುವುದಾಗಿದೆ.

ನ್ಯಾಯಾಲಯವು ಜಾಮೀನು ನೀಡುವುದರಲ್ಲಿ ನಮಗೆ ವಿರೋಧವಿಲ್ಲ. ಆದರೆ, ಜನಾರ್ದನ ರೆಡ್ಡಿ ಅವರನ್ನು ಈ ಪ್ರಕರಣದ ಅಂತಿಮ ತೀರ್ಪು ತೆಲಂಗಾಣ ಉಚ್ಚ ನ್ಯಾಯಾಲಯದಿಂದ ಬರುವವರೆಗೆ ಬಿಜೆಪಿ ಪಕ್ಷದಿಂದ ಅಮಾನತುಗೊಳಿಸಬೇಕೆಂದು ಕೋರುತ್ತೇವೆ ಎಂದಿದ್ದಾರೆ.

ಜಾಮೀನಿನಮೇಲೆ ಬಿಡುಗಡೆ ಆದ ಮೇಲೆಜನಾರ್ದನ ರೆಡ್ಡಿ ಅವರು ಮಾಧ್ಯಮಗಳ ಮುಂದೆ, ಉಚ್ಚ ನ್ಯಾಯಾಲಯವು ಎಲ್ಲಾ ಆರೋಪಗಳನ್ನು ತಿರಸ್ಕರಿಸಿದೆ ಎಂಬ ಸುಳ್ಳು ಹೇಳಿಕೆ ನೀಡಿದ್ದಾರೆ.ಇದು ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಪ್ರಯತ್ನವಲ್ಲದೆ ಸಾರ್ವಜನಿಕ ಮತ್ತು ಸರಕಾರಿ ಅಧಿಕಾರಿಗಳಿಗೆ ತಪ್ಪು ಮಾಹಿತಿ ನೀಡುತ್ತಿರುವುದನ್ನು ತೋರಿಸುತ್ತದೆ ಎಂದಿದ್ದಾರೆ.

# ಶಾಲೆ ಶುರುವಾಯಿತು... ಮುಂದೇನು?

ಶಾಲೆಗಳು ಆರಂಭವಾಗಿವೆ. ಎಲ್ಲ ಮಕ್ಕಳ ಪಾಲಕರು ತಂತಮ್ಮ ಮಕ್ಕಳ ಶಾಲಾ ಫೀಸನ್ನು ತುಂಬಿ ಶಾಲೆಯ ಸಮವಸ್ತ್ರಗಳನ್ನು, ಪುಸ್ತಕಗಳನ್ನು ನೋಟ್ ಪುಸ್ತಕಗಳನ್ನು ತಂದು ಕೊಟ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಇನ್ನು ಮಕ್ಕಳು ಅಮ್ಮಂದಿರಿಗೆ ಗಂಟು ಬಿದ್ದು ಎಲ್ಲಾ ಪುಸ್ತಕಗಳಿಗೆ ಕವರ್ ಹಾಕಿಸಿಕೊಂಡು ಹೊಸ ಸ್ಕೂಲ್ ಬ್ಯಾಗ್, ಊಟದ ಡಬ್ಬ, ಕಂಪಾಸ್ ಬಾಕ್ಸ್ ಮತ್ತು ಅಗತ್ಯ ವಸ್ತುಗಳನ್ನು ದುಂಬಾಲು ಬಿದ್ದು ಖರೀದಿಸಿ ಸಂತಸ ಪಡುತ್ತಿದ್ದಾರೆ.

ಇಷ್ಟು ದಿನದ ರಜಾ ದಿನಗಳಲ್ಲಿ ತುಸು ನೆಮ್ಮದಿಯಿಂದ ಕಾಲ ಕಳೆಯುತ್ತಿದ್ದ ಅಮ್ಮಂದಿರು ಮತ್ತೆ ತಮ್ಮ ಭಾವಂತದ ಬದುಕಿಗೆ ಸಜ್ಜಾಗುತ್ತಿದ್ದಾರೆ. ಮುಂಜಾನೆ ಎದ್ದು ಮಕ್ಕಳಿಗೆ ಬೇಕಾದ ತಿಂಡಿ ತೀರ್ಥಗಳನ್ನು, ಡಬ್ಬಕ್ಕೆ ಬೇಕಾಗುವ ಊಟವನ್ನು ತಯಾರಿಸುವ, ಮಕ್ಕಳನ್ನು ಎಬ್ಬಿಸಿ ಶಾಲೆಗೆ ಕಳುಹಿಸಲು ತಯಾರು ಮಾಡಿ ಅವರು ಶಾಲೆಯ ಬಸ್ಸು ಹತ್ತುವವರೆಗೆ ಅವರ ಹಿಂದೆ ಮುಂದೆ ಓಡಾಡಿ ಅವರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ತಮ್ಮ ಕಾಯಕಕ್ಕೆ ಮತ್ತೆ ಮರಳಿದ್ದಾರೆ. ತುಸು ಹೆಚ್ಚು ಕಮ್ಮಿ ಎಲ್ಲ ಮನೆಗಳಲ್ಲೂ ಇದೇ ಪಾಡು...ಇದೇ ಹಾಡು.

ಆದರೆ ವಿದ್ಯಾರ್ಥಿಗಳ ಬದುಕಿನ ಮುಖ್ಯವಾದ ಕಲಿಕೆಯ ಘಟ್ಟದಲ್ಲಿ ಶಾಲೆಗೆ ಮರಳಿರುವ ಮಕ್ಕಳು ಮತ್ತೆ ಓದು ಬರಹಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಇದು ಸಕಾಲ. ಕಳೆದ ವರ್ಷಗಳಲ್ಲಿ ಓದಿನಲ್ಲಿ ಆಸಕ್ತಿ ವಹಿಸದೆ ನಂತರ ಪರೀಕ್ಷೆಯಲ್ಲಿ ಸುಮಾರಾಗಿ ಬರೆದು ಕಡಿಮೆ ಅಂಕಗಳನ್ನು ಪಡೆದ ಮಕ್ಕಳು ಮತ್ತು ಮಕ್ಕಳ ಪ್ರಗತಿಯ ಕುಂಠಿತತೆಯನ್ನು ನೋಡಿ ಬೇಸರಗೊಂಡಿರುವ ಪಾಲಕರು ಮತ್ತು ಮಕ್ಕಳಿಗೆ ಎಲ್ಲವನ್ನು ಮತ್ತೆ ಹೊಸದಾಗಿ ಆರಂಭಿಸಲು ಇದು ಸಕಾಲ.

ಮನುಷ್ಯನ ಬದುಕಿನಲ್ಲಿ ಓದು ಬರಹಗಳು ಅತ್ಯವಶ್ಯಕ ಎಂಬ ಅರಿವನ್ನು ಹೊಂದಿದ್ದು ಎಲ್ಲರೂ ಓದಿನ ಕುರಿತು ಹೆಚ್ಚು ಕಾಳಜಿವಹಿಸಲು ನಮ್ಮ ಬದುಕನ್ನು ರೂಪಿಸಲು ನಮಗೆ ಶಿಕ್ಷಣದ ಅವಶ್ಯಕತೆ ಇದೆ ಎಂಬುದೇ ಕಾರಣ.ಹಾಗಾದರೆ ಮಕ್ಕಳು ಓದಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಮಾಡಬೇಕಾದದ್ದು ಏನು? ಎಂಬ ಮಿಲಿಯನ್ ಡಾಲರ್ ಪ್ರಶ್ನೆಗೆ ಉತ್ತರವನ್ನು ಹುಡುಕೋಣ ಬನ್ನಿ.

ಶಾಲೆಯಲ್ಲಿ ಶಿಕ್ಷಕರು ಹೇಳಿದ ಪಾಠಗಳನ್ನು ಗಮನವಿಟ್ಟು ಆಲಿಸಬೇಕು. ಅಕಸ್ಮಾತ್ ಅವರು ಹೇಳಿದ ವಿಷಯದಲ್ಲಿ ಏನಾದರೂ ಗೊಂದಲ ತೋರಿದರೆ ಪಾಠದ ಮಧ್ಯದಲ್ಲಿ ಅವರಿಗೆ ಅಡಚಣೆ ಮಾಡದೇ ಅವರು ಹೇಳುವುದು ಮುಗಿದ ಮೇಲೆ ನಿಮ್ಮ ಸಂಶಯಗಳನ್ನು ಅವರಲ್ಲಿ ಕೇಳಿಕೊಂಡು ನಿವಾರಿಸಿಕೊಳ್ಳಿ.

ಅಯ್ಯೋ ಹಾಗೆ ಪ್ರಶ್ನೆಗಳನ್ನು ಕೇಳಿದರೆ ನನ್ನನ್ನು ದಡ್ಡ ಎಂದುಕೊಳ್ಳುವುದಿಲ್ಲವೇ ಎಂದು ಭಾವಿಸುವುದು ಬೇಡ. ಕೇಳದೇ ಇದ್ದರೆ ಖಂಡಿತವಾಗಿಯೂ ವಿಷಯ ನಿಮಗೆ ಅರ್ಥವಾಗದೆ ನೀವು ದಡ್ಡರಾಗುವ ಸಂಭವ ಇರುತ್ತದೆ.

ಶಾಲೆಯಲ್ಲಿ ಅಂದಂದು ಕಲಿಸಿದ ಪಾಠಗಳನ್ನು ಅಂದಂದೇ ಮನೆಯಲ್ಲಿ ಪುನರಾವರ್ತನೆ ಮಾಡಿ. ಚಿಕ್ಕ ತರಗತಿಗಳಾದರೆ ಕೇವಲ ಒಂದು ಗಂಟೆಯ ಅವಧಿ ಮನೆ ಪಾಠಕ್ಕೆ ಸಾಕಾದರೆ ತುಸು ದೊಡ್ಡ ತರಗತಿಗೆ ಒಂದೂವರೆ ಗಂಟೆಯಿಂದ 2 ಗಂಟೆ ಸಾಕು. ಅದರಲ್ಲೂ ಮೊದಲ 25 ನಿಮಿಷ ಲಕ್ಷ್ಯ ಕೊಟ್ಟು ಓದಿನಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡು ನಂತರ ಐದು ನಿಮಿಷದ ವಿರಾಮ ತೆಗೆದುಕೊಳ್ಳಬೇಕು. ಮತ್ತೆ 25 ನಿಮಿಷ ಓದಿ ಮತ್ತೆ ಐದು ನಿಮಿಷದ ವಿರಾಮ ತೆಗೆದುಕೊಳ್ಳಬೇಕು.

ನಿಮಗೆ ಇಷ್ಟವಾದ ವಿಷಯವನ್ನು ಮೊದಲು ಓದಲು ಆರಂಭಿಸಿ. ಇಷ್ಟವಾದ ವಿಷಯದ ಓದಿನ ಆಸಕ್ತಿ ನಿಮಗೆ ಮುಂದೆ ಕ್ಲಿಷ್ಟವಾದ ವಿಷಯಗಳನ್ನು ಓದಲು ಸಹಾಯಕವಾಗುತ್ತದೆ.

ಕ್ಲಿಷ್ಟವಾದ ವಿಷಯಗಳನ್ನು ಶಿಕ್ಷಕರ ಬಳಿ ಮತ್ತೆ ಮತ್ತೆ ಕೇಳಿ ಅರಿತುಕೊಂಡು ಅವುಗಳನ್ನು ಮನನ ಮಾಡಿಕೊಳ್ಳಬೇಕು. ದೈನಂದಿನ ಅಭ್ಯಾಸದಿಂದ ಎಂತಹದ್ದೇ ಕ್ಲಿಷ್ಟ ವಿಷಯಗಳು ಸರಳವೆನಿಸತೊಡಗುತ್ತವೆ.

ಎಷ್ಟು ಸಮಯ ಓದಿದೆ ಎಂಬುದಕ್ಕಿಂತ ಎಷ್ಟು ವಿಷಯವನ್ನು ಅರ್ಥ ಮಾಡಿಕೊಂಡೆ ಎಂಬುದು ಬಹಳ ಮುಖ್ಯ. ಸಾಕಷ್ಟು ಸಮಯ ಕುಳಿತು ಓದುವುದಕ್ಕಿಂತ ಗಮನವಿಟ್ಟು ಓದುವುದು ಅತ್ಯವಶ್ಯಕ. ಓದುವಾಗ ಅತ್ತಿತ್ತ ಕದಲದಂತೆ ಏಕಾಗ್ರ ಚಿತ್ತರಾಗಿ



ಓದಬೇಕು. ಸಾಧ್ಯವಾದಷ್ಟು ಬೆಳಗಿನ ಜಾವದಲ್ಲಿ ನೀರವ ವಾತಾವರಣದಲ್ಲಿ ಓದುವುದು ಒಳ್ಳೆಯದು.

ಕೇವಲ ಓದಿದರಷ್ಟೇ ಸಾಲದು... ಓದಿದ್ದನ್ನು ಮನನ ಮಾಡಿಕೊಳ್ಳಬೇಕು. ಪಠಣ, ಮನನ ಮತ್ತು ಪುನರ್ ಮನನಗಳ ಮೂಲಕ ವಿಷಯವನ್ನು ಅರಿತುಕೊಂಡು ಅಭ್ಯಸಿಸಬೇಕು. ಬಾಯಿ ಪಾಠ ಮಾಡಿದ ವಿಷಯ ಮರೆತು ಹೋಗಬಹುದು.... ಮಂತ್ರಗಳು, ಹಾಡುಗಳು, ಮಗ್ಗಿಗಳು ಮಾತ್ರ ಬಾಯಿ ಪಾಠ ಮಾಡಲು ಸೂಕ್ತ. ಗಣಿತದಂತಹ ವಿಷಯಗಳನ್ನು ಪದೇಪದೇ ಮಾಡುವುದರಿಂದಲೇ ಕಲಿಯಲು ಸಾಧ್ಯ.

ಶಾಲೆಗಳಲ್ಲಿ ಪ್ರತಿ ತಿಂಗಳಿಗೊಮ್ಮೆ ಇಡುವ ಕಿರುಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸುವುದಕ್ಕಿಂತ ಪ್ರತಿದಿನವೂ ಅವರು ಓದು ಬರಹಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಮಕ್ಕಳಿಗೆ ಅರ್ಥವಾಗದ ವಿಷಯಗಳನ್ನು ಅವರೊಂದಿಗೆ ಕುಳಿತುಕೊಂಡು ಚರ್ಚಿಸಿ ನಿಮಗೆ ತಿಳಿದಿದ್ದನ್ನು ಹೇಳಿಕೊಟ್ಟಾಗ ಮಕ್ಕಳು ಪಾಲಕರ ಸಹಯೋಗದಲ್ಲಿ ಇನ್ನಷ್ಟು ಅರಳಬಹುದು.

ಪಠ್ಯ ಚಟುವಟಿಕೆಗಳಿಗೆ ಮಾತ್ರವಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ತಮ್ಮನ್ನು ತಾವು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಪಾಠ ಪ್ರವಚನಗಳ ಜೊತೆ ಜೊತೆಗೆ ಆಟೋಟಗಳು ಮುಖ್ಯ. "ಅ ಸೌಂಡ್ ಮೈಂಡ್ ಇನ್ ಎ ಸೌಂಡ್ ಬಾಡಿ" ಎಂಬಂತೆ ಮಕ್ಕಳು ದೈಹಿಕವಾಗಿ ಆಟೋಟದಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಸದೃಢತೆ ಉಂಟಾಗುತ್ತದೆ. ಆಟೋಟಗಳು ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ, ಹೊಂದಾಣಿಕೆ, ಛಲ, ಶ್ರದ್ಧೆ

ಮತ್ತು ಸ್ಫೂರ್ತಿಯನ್ನು ನೀಡುತ್ತವೆ. ಆಟವಾಡುವ ಮಕ್ಕಳು ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಹೊಂದಿದ್ದು ಆರೋಗ್ಯವಂತರಾಗಿರುತ್ತಾರೆ, ಆದ್ದರಿಂದ ಮಕ್ಕಳನ್ನು ಸಾಧ್ಯವಾದಷ್ಟು ಹೊರಾಂಗಣ ಕ್ರೀಡೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕು.

ಚಿಕ್ಕಂದಿನಿಂದಲೇ ಮಕ್ಕಳನ್ನು ಹಾಡು, ನೃತ್ಯ, ರಂಗಕಲೆ, ನಾಟಕ, ದೊಡ್ಡಾಟ, ಬಯಲಾಟ ಮುಂತಾದ ಪ್ರದರ್ಶನ ಕಲೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಭಾಷಣ, ಪ್ರಬಂಧ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ಚದುರಂಗ ಕೇರಂ ಚೌಕಬಾರದಂತಹ ಆಟಗಳನ್ನು ಕೂಡ ಕಲಿಸಬೇಕು. ನಮ್ಮ ಗ್ರಾಮೀಣ ಭಾಗದಲ್ಲಿ ನಡೆಯುವ ಹಬ್ಬ,ಹುಣ್ಣಿವೆ, ಜಾತ್ರೆ ಕರಗಗಳ ಕುರಿತು ಮಾಹಿತಿ ನೀಡಬೇಕು ಮತ್ತು ಪ್ರತ್ಯಕ್ಷವಾಗಿ ಕರೆದೊಯ್ದು ತೋರಿಸಬೇಕು. ಈ ರೀತಿ ಮಾಡುವುದರಿಂದ ಮಕ್ಕಳಿಗೆ ವಿವಿಧ ವಿಷಯಗಳ ಜ್ಞಾನ ದೊರೆಯುತ್ತದೆ. ಧೈರ್ಯ, ಸಾಹಸ ಪ್ರವೃತ್ತಿಗಳು ಮಕ್ಕಳಲ್ಲಿ ಮನೆ ಮಾಡುತ್ತವೆ.

ಇದರ ಜೊತೆಗೆ ಪಾಲಕರು ಮತ್ತೊಂದು ಕೆಲಸವನ್ನು ಮಾಡಬೇಕಾಗುತ್ತದೆ. ರಜೆ ಬಿಟ್ಟಾಗ ಮಕ್ಕಳನ್ನು ಕರೆದುಕೊಂಡು ಸ್ನೇಹಿತರ ಸಂಬಂಧಿಕರ ಮನೆಯ ಕಾರ್ಯಕ್ರಮಗಳಿಗೆ ಹೋಗುವುದು ಸರಿಯಷ್ಟೇ ಆದರೆ ಎಷ್ಟೋ ಬಾರಿ ರಜೆ ಇಲ್ಲದೆ ಹೋದಾಗಲೂ ಕೂಡ ಮಕ್ಕಳಿಗೆ ರಜೆ ಹಾಕಿಸಿ ಎಂಟೆಂಟು ದಿನ ಊರಿಗೆ ಹೋಗುವ ಪಾಲಕರು ನಮ್ಮಲ್ಲಿ ಇದ್ದಾರೆ. ಹಾಗೆ ತಾವು ಮಕ್ಕಳನ್ನು ಕರೆದುಕೊಂಡು ಹೋಗಿ ಬಂದ ನಂತರ ಈಗಾಗಲೇ ತಮ್ಮ ಪಾಠಗಳು ಮುಗಿದು ಹೋಗಿದ್ದು ಅವುಗಳನ್ನು ಮರಳಿ ಶಿಕ್ಷಕರ ಬಳಿ ಕೇಳುವ ಧೈರ್ಯ ಇಲ್ಲದೆ ಮಕ್ಕಳು ಹಿಂಜರಿದರೆ ಶಿಕ್ಷಕರಿಗೂ ಇವರು ಪದೇಪದೇ ರಜೆ ಹಾಕಿದ್ದರ ಕುರಿತು ಕೊಂಚ ಆಕ್ಷೇಪಣೆ ಇದ್ದೆ ಇರುತ್ತದೆ. ಇದು ಪಾಲಕರು, ಶಿಕ್ಷಕರು ಮತ್ತು ಮಕ್ಕಳ ನಡುವಿನ ಶೀತಲ ಸಮರಕ್ಕೆ ಕಾರಣವಾಗುತ್ತದೆ.

ರಜೆ ದಿನಗಳಲ್ಲಾದರೆ ಪರವಾಗಿಲ್ಲ ಆದರೆ ಶಾಲೆ ಇದ್ದಾಗ ಸಾಧ್ಯವಾದಷ್ಟು ಮಕ್ಕಳನ್ನು ಸಮಾರಂಭಗಳಿಗೆ ಕರೆದೊಯ್ಯದೆ ಇರುವುದು ಒಳ್ಳೆಯದು.

ಇನ್ನೊಂದು ಮುಖ್ಯವಾದ ವಿಷಯ ಎಂದರೆ ಪಾಲಕರು ಶಾಲಾ ವರ್ಷದ ಆರಂಭದ ದಿನಗಳಲ್ಲಿ ಮಕ್ಕಳ ಕುರಿತು ಅಷ್ಟೇನೂ ಗಮನಹರಿಸುವುದಿಲ್ಲ.... ಆದರೆ ಪರೀಕ್ಷೆಯ ಸಮಯದಲ್ಲಿ ಮೈ ಮೇಲೆ ದೆವ್ವ ಬಂದವರಂತೆ ಪರೀಕ್ಷೆ ಬಂತು ಓದಿಕೋ, ಪರೀಕ್ಷೆ ಬಂತು ಬರೆದು ತೆಗೆ ಎಂದು ಬೆನ್ನು ಬೀಳುತ್ತಾರೆ. ಆಟ ಆಡುವುದನ್ನು ನಿಷೇಧಿಸುತ್ತಾರೆ. ಮನರಂಜನೆಯನ್ನು ಇದು ಖಂಡಿತ ತಪ್ಪು.

ಪದೇಪದೇ ಮಕ್ಕಳನ್ನು ಶಾಲೆ ಬಿಡಿಸಿ ಕಾರ್ಯಕ್ರಮಗಳಿಗೆ ಸಮಾರಂಭಗಳಿಗೆ ಊರಿಗೆ ಕರೆದೊಯ್ಯುವುದರಿಂದ ಮಕ್ಕಳು ವಿದ್ಯಾಭ್ಯಾಸದಿಂದ ವಿಮುಖರಾಗುತ್ತಾರೆ. ಇದು ಪಾಲಕರ ಗಮನದಲ್ಲಿರಲಿ.

ಇನ್ನು ಮಕ್ಕಳು ಪದೇಪದೇ ಹೊಟ್ಟೆ ನೋವು ತಲೆ ನೋವು ತಲೆನೋವು ನೆಪ ಹೇಳಿ ಶಾಲೆ ತಪ್ಪಿಸುತ್ತಿದ್ದರೆ ಸೂಕ್ಷ್ಮವಾಗಿ ಮಕ್ಕಳ ವರ್ತನೆಯಲ್ಲಿನ ಬದಲಾವಣೆಗಳನ್ನು ಗಮನಿಸಿ. ಕೆಲ ಬಾರಿ ಮಕ್ಕಳು ಹೋಂವರ್ಕ್ ಮಾಡದೆ ಇದ್ದಾಗ ಶಿಕ್ಷಕರು ತನ್ನನ್ನು ಗದರಿಸಬಹುದು ಎಂಬ ಹೆದರಿಕೆಯಿಂದಲೂ ಹೀಗೆ ನೆಪ ಹೇಳಬಹುದು.

ಮತ್ತೆ ಕೆಲಬಾರಿ ಮಕ್ಕಳಿಗೆ ನಿಜವಾಗಿಯೂ ತೊಂದರೆ ಇದ್ದರೆ ಒಳ್ಳೆಯ ತಜ್ಞ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಕೊಡಿಸಿ. ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇದ್ದರೆ ಆಗಾಗ ದೈಹಿಕ ತೊಂದರೆಗಳಿಗೆ ಸಿಲುಕುತ್ತಾರೆ. ಉತ್ತಮ ಮನೋದೈಹಿಕ ಆರೋಗ್ಯವನ್ನು ಪಡೆಯಲು

ಒಳ್ಳೆಯ ಸಾತ್ವಿಕ ಮತ್ತು ಪೋಷಣ ಯುಕ್ತ ಆಹಾರವನ್ನು ಮಕ್ಕಳಿಗೆ ಸೇವಿಸಲು ರೂಢಿ ಮಾಡಿಸಬೇಕು. ಒಳ್ಳೆಯ ಆರೋಗ್ಯ, ಆಹಾರ ಮತ್ತು ವಿಹಾರಗಳೇ ಮಕ್ಕಳಿಗೆ ಉತ್ತಮ ಮತ್ತು ಆರೋಗ್ಯದ ಬದುಕಿಗೆ ದಾರಿ ಎಂಬುದನ್ನು ಅವರಿಗೆ ಅರಿವು ಮೂಡಿಸಿ.

**ತ್ರಿಕೋನದ ಮೂರು ಭುಜಗಳಂತೆ**

ಪಾಲಕರು, ಮಕ್ಕಳು ಮತ್ತು ಶಿಕ್ಷಕರು ಮಗುವಿನ ಶೈಕ್ಷಣಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರಇ ವಹಿಸುತ್ತಾರೆ. ಯಾವುದೇ ಒಬ್ಬರ ಕಾಣಿಕೆ ಅಲ್ಪವಾದರೂ ಹೊಡೆತ ಬೀಳುವುದು ಮಗುವಿನ ಶೈಕ್ಷಣಿಕ ಭವಿಷ್ಯಕ್ಕೆ ಎಂಬುದನ್ನು ಅರಿವಿನಲ್ಲಿಟ್ಟುಕೊಂಡು ಮಕ್ಕಳ ಶೈಕ್ಷಣಿಕ ಜೀವನಕ್ಕೆ ಭದ್ರಬುನಾದಿಯನ್ನು ಹಾಕೋಣ.

**ವೀಣಾ ಹೇಮಂತಗೌಡ ಪಾಟೀಲ್**
**ಮುಂಡರಗಿ ಗದಗ್**

# 12 ನೇ ಶತಮಾನದಲ್ಲಿ ಅನ್ನ ಪ್ರಸಾದ ನೀಡಿದ ಮಹಾ ಶಿವ ಶರಣ ಗಬ್ಬೂರಿನ ಬಿಬ್ಬಿ ಬಾಚರಸ : ಮಾನಶಯ್ಯ ನಾಯಕ

**ದೇವದುರ್ಗ,ಜೂ.14–** 12ನೇ ಶತಮಾನದ ಬಸವಣ್ಣನವರ ಸಮಕಾಲಿನ ಶರಣ ಬಿಬ್ಬಿ ಬಾಚರಸರು ದಾಸೋಹ ಕಾಯಕ ಮಾಡುತ್ತಾ ಅಸಿದವರಿಗೆ ಪ್ರಸಾದ ನೀಡಿದ ಮಹಾನ್ ಶರಣರು ಎಂದು ಕರ್ನಾಟಕ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಪ್ರಾಂಶುಪಾಲ ಮಾನಶಯ್ಯ ನಾಯಕ ಹೇಳಿದರು.

ಅವರು ಶನಿವಾರದಂದು ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು ದೇವದುರ್ಗದ ವತಿಯಿಂದ ಬಿಎ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ನಿಯೋಜಿತ ಕಾರ್ಯದಲ್ಲಿ ಗಬ್ಬೂರು ಒಂದು ಐತಿಹಾಸಿಕ ಅಧ್ಯಯನ ಎಂದು ತಳ ಆಯ್ಕೆ ಮಾಡಿಕೊಂಡಿದ್ದು ಸ್ಥಳದ ಭೇಟಿಗಾಗಿ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಭೇಟಿ ನೀಡಿ ಸ್ಥಳದ ಹಿನ್ನೆಲೆ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಳ್ಳುವಂತೆ ತಿಳಿಸಿ ಶರಣರು ನುಡಿದಂತೆ ನಡೆದಿದ್ದು ಅದರಲ್ಲಿ ಗಬ್ಬೂರಿನ ಮಹಾಶಿವ ಚರಣರು ಒಬ್ಬರು, ಕಲ್ಯಾಣದಲ್ಲಿ ಎಲ್ಲೇ ಪ್ರಸಾದ ಉಳಿದರೆ ಅದನ್ನು ತಂದು ಅಸಿದವರಿಗೆ ಅಸಿವು ನಿಗಿಸುವ ಕಾಯಕ ಮಾಡುತಿದ್ದರು.

ಇವರ ಅಂಕಿತ ನಾಮ ಏಣಾಂಕಧರ ಸೋಮೇಶ್ವರಲಿಂಗ ಎಂಬ ಅಂಕಿತ ದೊಂದಿಗೆ ರಚನೆ ಗೊಂಡ 102 ವಚನಗಳು



ದೊರೆಕಿವೆ ಎಂದು ತಿಳಿಸಿದರು, ಈ ಸಂದರ್ಭದಲ್ಲಿ ಕರ್ನಾಟಕ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಅಧ್ಯಕ್ಷ ನಲ್ಲಾರೆಡ್ಡಿ, ಇತಿಹಾಸ ಉಪನ್ಯಾಸಕ ಅಮರೇಶ ಗೋಪಾಳಾಪುರ, ರಾಜ್ಯಶಾಸ್ತ್ರ ಉಪನ್ಯಾಸಕ ಶಿವುಕುಮಾರ ಗಬ್ಬೂರು, ಇಂಗ್ಲಿಷ್ ಉಪನ್ಯಾಸಕ ಶಾವವ್ ಗಬ್ಬೂರು, ಪ್ರಥಮ ದರ್ಜೆ ಸಹಾಯುಕರು ನಾಗಮ್ಮ,ವರದಿಗಾರ ನಿರಂಜನ್ ಮಸರಕಲ್ ಸೇರಿದಂತೆ ಬಿಎ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಇದ್ದರು.

# ಜಿ–7 ಶೃಂಗ ಸಭೆಗೆ ಪ್ರಧಾನಿ ಮೋದಿ

**ನವದೆಹಲಿ,ಜೂ.14–** ಪ್ರಧಾನಿ ನರೇಂದ್ರ ಮೋದಿ ಮುಂದಿನ ವಾರದ ಕೊನೆಯಲ್ಲಿ ಜಿ 7 ಶೃಂಗಸಭೆಯಲ್ಲಿ ಭಾಗವಹಿಸಲು ಕೆನಡಾಕ್ಕೆ ಪ್ರಯಾಣಿಸಲಿದ್ದಾರೆ. ಭಾನುವಾರದಿಂದ ಪ್ರಾರಂಭವಾಗುವ ಮೂರು ರಾಷ್ಟ್ರಗಳ ಪ್ರವಾಸದ ಭಾಗವಾಗಿ, ಪ್ರಧಾನಿ ಸೈಪ್ರಸ್ ಮತ್ತು ಕ್ರೊಯೇಷಿಯಾಕ್ಕೂ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕೆನಾಡದಿಂದ ಆಹ್ವಾನವನ್ನು ಸರ್ಕಾರ ಸ್ವಿಕರಿಸಿದ ನಂತರ ಪ್ರಧಾನಿಯವರು ಅಲ್ಲಿಗೆ ತೆರಳುತ್ತಿರುವುದು ವಿಶೇಷವಾಗಿದೆ. ಭಾರತವು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಕಾರ್ಯಾಚಾರಣೆ ನಡೆಸಿದ ನಂತರ ಮೋದಿಯವರ ಮೊದಲ ವಿದೇಶ ಪ್ರವಾಸ ಇದಾಗಿದೆ. ಖಲಿಸ್ತಾನಿ ವಿಷಯದ ಬಗ್ಗೆ ನವದ'ಹಲಿ ಮತ್ತು ಒಟ್ಟಾವಾ ನಡುವಿನ ರಾಜತಾಂತ್ರಿಕ ಸಂಬಂಧಗಳು ಹದಗೆಟ್ಟ ನಂತರ ಕೆನಡಾಕ್ಕೆ ಅವರ ಮೊದಲ ಭೇಟಿ ಇದಾಗಿರುವುದರಿಂದ ಈ ವಿದೇಶಿ ಪ್ರವಾಸ, ವಿಶೇಷವಾಗಿ ಹೆಚ್ಚಿನ ಮಹತ್ವದ್ದಾಗಿದೆ.

ಪ್ರವಾಸದ ಎರಡನೇ ಹಂತದಲ್ಲಿ, ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರ ಆಹ್ವಾನದ ಮೇರೆಗೆ, ಮೋದಿ ಅವರು ಜೂನ್ 16–17 ರಂದು ಕೆನಡಾದ ಕನನಾಸ್ಕಿಸ್‌ಗೆ ಭೇಟಿ ನೀಡಿ ಜಿ 7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಶೃಂಗಸಭೆಯ ಸಂದರ್ಭದಲ್ಲಿ, ಇಂಧನ ಭದ್ರತೆ, ತಂತ್ರಜ್ಞಾನ ಮತ್ತು ನಾವೀನ್ಯತೆ ಸೇರಿದಂತೆ ಪ್ರಮುಖ ಜಾಗತಿಕ ವಿಷಯಗಳ ಕುರಿತು ಭಾರತದ ನಿಲುವನ್ನು ಪ್ರಧಾನಿ ಮಂಡಿಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಜೂನ್ 15 ರಿಂದ 16 ರವರೆಗೆ ಸೈಪ್ರಸ್? ಭೇಟಿಯೊಂದಿಗೆ ವಿದೇಶ ಪ್ರವಾಸ ಆರಂಭವಾಗಲಿದ್ದು, ನಂತರ ಜೂನ್ 16 ರಿಂದ 17 ರವರೆಗೆ ಜಿ 7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದು, ಜೂನ್ 18 ರಂದು ಕ್ರೊಯೇಷಿಯಾಕ್ಕೆ ಅಧಿಕೃತ ಭೇಟಿಯೊಂದಿಗೆ ಮುಕ್ತಾಯಗೊಳ್ಳಲಿದೆ.

# ಸಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿದ ಶಾಸಕ

**ಬಳ್ಳಾರಿ, ಜೂ.14–** ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿಯವರು ಶುಕ್ರವಾರ ನಗರದ ಹಾವಂಭಾವಿ ಪ್ರದೇಶದ ಹಲವು ಕಡೆಗಳಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಈ ಭಾಗವಾಗಿ ಶುಕ್ರವಾರ ಸಂಜೆ ವಾರ್ಡ್ ಸಂಖ್ಯೆ 34ರ ವಿದ್ಯಾನಗರದ ರಾಘಾ ಪೋರ್ಟ್ ಅಪಾರ್ಟ್‌ಮೆಂಟಿನ ಹಿಂಭಾಗ, 6ನೇ ಅಡ್ಡ ರಸ್ತೆಯ ಲಿಂಕ್ ರಸ್ತೆಗಳ ಅಭಿವೃದ್ಧಿಗಾಗಿ ಕೆಕೆಆರ್'ಡಿಬಿ ಅನುದಾನದ ಅಡಿ ಅಂದಾಜು 1 ಕೋಟಿ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.



Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**